# ಎಐ ಎಂಬ ಸುನಾಮಿ ಬರುತ್ತಿದೆ, ದಾರಿ ಬಿಡಿ!

■ ಎಐ ತಂತ್ರಜ್ಞಾನದಲ್ಲಿ ತನಗಿರುವ ಬಲಿಷ್ಠ ಸಾಮರ್ಥ್ಯವನ್ನು ಭಾರತವು ಜಗಕ್ಕೆ ಸಾರುವ ನಿಟ್ಟಿನಲ್ಲಿ ಈ ಶೃಂಗವು ಬಹಳ ಪ್ರಾಮುಖ್ಯವನ್ನು ಪಡೆದುಕೊಂಡಿತ್ತು. ಶೃಂಗವನ್ನು ಸಮರ್ಥವಾಗಿ ನಿರ್ವಹಿಸಿದ ಭಾರತವು, ಎಐ ತಂತ್ರಜ್ಞಾನ ಲೋಕಕ್ಕೆ ಸಂಬಂಧಿಸಿದ ನಿಯಮಗಳ, ಯೋಜನೆಗಳು ಮತ್ತು ದೃಷ್ಟಿಕೋನವನ್ನು ರೂಪಿಸಬಲ್ಲ ನಾಯಕನ ಪಾತ್ರವನ್ನು ತಾನು ವಹಿಸುವುದಾಗಿ ಜಗತ್ತಿಗೆ ಸ್ಪಷ್ಟವಾಗಿ ಸಾರಿತು.

ಕಾಲಚಕ್ರ ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದ ಪ್ರಮುಖ ಕಂಪನಿಗಳು, ಹೂಡಿಕೆದಾರರು, ಜಾಗತಿಕ ನಾಯಕರನ್ನು ಒಂದೆಡೆ ಸೇರಿಸಿದ ಮತ್ತು ಭಾರತವು ಆತಿಥ್ಯವನ್ನು ವಹಿಸಿದ್ದ ಎಐ ಇಂಪ್ಯಾಕ್ಟ್ ಸಮಿಟ್-2026 ಹೆಸರಿನ 5 ದಿನಗಳ ಶೃಂಗಸಭೆಯು ಇತ್ತೀಚೆಗೆ ನವದೆಹಲಿಯಲ್ಲಿ ಸಂಪನ್ನಗೊಂಡಿತು.

ಬಹೂಪಯೋಗಿ ಎನ್ನಲಾಗಿರುವ ಈ ಬಹುಚರ್ಚಿತ ಶೃಂಗದಲ್ಲಿ ನೀತಿ ನಿರೂಪಕರು, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಂಶೋಧಕರು/ದಿಗ್ಗಜರು, ಸ್ಟಾರ್ಟಪ್ ನಾಯಕರು, ವಿದೇಶಿ ಗಣ್ಯರು, ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪ್ರಮುಖರು ಭಾಗಿಯಾಗಿದ್ದರು.

ಎಐ ತಂತ್ರಜ್ಞಾನದಲ್ಲಿ ತನಗಿರುವ ಬಲಿಷ್ಠ ಸಾಮರ್ಥ್ಯವನ್ನು ಭಾರತವು ಜಗಕ್ಕೆ ಸಾರುವ ನಿಟ್ಟಿನಲ್ಲಿ ಈ ಶೃಂಗವು ಬಹಳ ಪ್ರಾಮುಖ್ಯವನ್ನು ಪಡೆದುಕೊಂಡಿತ್ತು. ಶೃಂಗವನ್ನು ಸಮರ್ಥವಾಗಿ ನಿರ್ವಹಿಸಿದ ಭಾರತವು, ಎಐ ತಂತ್ರಜ್ಞಾನ ಲೋಕಕ್ಕೆ ಸಂಬಂಧಿಸಿದ ನಿಯಮಗಳ, ಯೋಜನೆಗಳು ಮತ್ತು ದೃಷ್ಟಿಕೋನವನ್ನು ರೂಪಿಸಬಲ್ಲ ನಾಯಕನ ಪಾತ್ರವನ್ನು ತಾನು ವಹಿಸುವುದಾಗಿ ಜಗತ್ತಿಗೆ ಸ್ಪಷ್ಟವಾಗಿ ಸಾರಿತು.

ಇದು ಶೃಂಗದ ಯಶಸ್ಸಿನ ಬಲುದೊಡ್ಡ ಭಾಗ. ಎಐ ತಂತ್ರಜ್ಞಾನದ ಬಗೆಗಿನ ಭಾರತದ ಚಿಂತನೆ ಮತ್ತು ಯೋಜನೆಗಳು ಪ್ರಬುದ್ಧವಾಗುತ್ತಿವೆ ಎಂಬುದನ್ನು ಈ ಶೃಂಗ ರುಜುವಾತು ಮಾಡಿದೆ.

ಎಐ ತಂತ್ರಜ್ಞಾನದಲ್ಲಿನ ಮುಂಚೂಣಿಯ ದೇಶವಾಗಿ ಹೊರಹೊಮ್ಮುತ್ತಿರುವ ಭಾರತವು ಮುಂದಿನ 2 ವರ್ಷಗಳಲ್ಲಿ ಈ ವಲಯದಲ್ಲಿ 200 ಶತಕೋಟಿ ಡಾಲರ್‌ಗಿಂತಲೂ ಅಧಿಕ ಹೂಡಿಕೆಯನ್ನು ಆಕರ್ಷಿಸುತ್ತಿದೆ ಎನ್ನುವ ವಿಚಾರವೇ ಸಂಚಲನ ಮೂಡಿಸಿದೆ.

ಭಾರತದಲ್ಲಿ ಎಐ ತಂತ್ರಜ್ಞಾನದ ಆವಿಷ್ಕಾರ ಮತ್ತು ಪ್ರಸರಣ ತ್ವರಿತವಾಗಿ ಸಾಗಲಿದ್ದು, ಜನರ ಜೀವನಮಟ್ಟವನ್ನು ಸುಗಮಗೊಳಿಸಲು ಹೊಸ ಕಂಪನಿಗಳು ಮತ್ತು ಅವುಗಳ ಎಐ ಉತ್ಪನ್ನಗಳು ಮುಂದಿನ ದಿನಗಳಲ್ಲಿ ಬರಲಿವೆ.

ಪ್ರಧಾನಿ ಮೋದಿಯವರು ಈ ಶೃಂಗದಲ್ಲಿ ಮಾತನಾಡುತ್ತಾ, ಎಐ ತಂತ್ರಜ್ಞಾನವು ಉದ್ಯೋಗಗಳನ್ನು ಕಸಿದುಕೊಳ್ಳಲಿದೆ ಎಂಬ ಆತಂಕ ಬೇಡ. ಯಾವುದೇ ಸವಾಲಿಗೆ ಸಮರ್ಪಕ ಪೂರ್ವಸಿದ್ಧತೆಯೇ ಮದ್ದು ಎನ್ನುವಂತೆ, ನವೀನ ಕೌಶಲದ ಕಲಿಕೆಯ ಮೂಲಕ ಎಐ ಸವಾಲನ್ನು ಎದುರಿಸಲು ಭಾರತವು ಸಿದ್ಧವಾಗಬೇಕು.

ಇದಕ್ಕಾಗಿ ಸರಕಾರವು ಕೌಶಲಾಭಿವೃದ್ಧಿ ಯೋಜನೆಗಳನ್ನು ಆರಂಭಿಸಿದೆ. ಮಾನವ ಸಂಪನ್ಮೂಲದ ಕೌಶಲವನ್ನು ಅವಲೋಕಿಸಿ, ಅದಕ್ಕೆ ಮತ್ತಷ್ಟು ಬಲ ತುಂಬಿ, ಎಐ ವ್ಯವಸ್ಥೆಗೆ ಸಜ್ಜುಗೊಳಿಸುವ ಕಾರ್ಯ ಭರದಿಂದ ಸಾಗಿದೆ ಎಂದರು. ಇದು ದೇಶದ ಎಐ ಭವಿಷ್ಯಕ್ಕೆ ಹಿಡಿದ ದುರ್ಬೀನು ಎಂದರೆ ಅತಿಶಯೋಕ್ತಿಯಲ್ಲ.

ಎಐ ತಂತ್ರಜ್ಞಾನದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಳಾಗಿ, ಆ ವಲಯ ಬೆಳೆದಂತೆ ಹೊಸ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎನ್ನುವುದು ತಜ್ಞರ ಅಭಿಮತ. ಎಐ ವಿಚಾರದಲ್ಲಿ ಸಾರ್ವಭೌಮತ್ವ, ಒಳಗೊಳ್ಳುವಿಕೆ ಮತ್ತು ನಾವೀನ್ಯ ಈ ಮೂರು ಭಾರತದ ದೃಷ್ಟಿಕೋನಗಳಾಗಿವೆ. ಎಲ್ಲವೂ ಅಂದುಕೊಂಡಂತೆಯೇ ನಡೆದಲ್ಲಿ ಮುಂದಿನ ಕೆಲವೇ ವರ್ಷಗಳಲ್ಲಿ ಜಗತ್ತಿನ ಮೊದಲ 3 ಸೂಪರ್‌ಪವರ್ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಲಿದೆ.


ಆಹಾರ, ಕೃಷಿ, ಹವಾಮಾನ, ಉತ್ಪಾದನೆ, ಮಾರುಕಟ್ಟೆ, ಸರಕು ಸಾಗಣೆ, ಮಾಹಿತಿ ತಂತ್ರಜ್ಞಾನ, ಮನರಂಜನೆ, ಶಿಕ್ಷಣ, ಪ್ರವಾಸ, ಆರೋಗ್ಯ, ಹಣಕಾಸು, ಕಾರ್ಯಾಂಗ, ನ್ಯಾಯಾಂಗ, ರೈಲು, ವೈಮಾನಿಕ ಕ್ಷೇತ್ರ, ಶ್ರಮಿಕ ವಲಯ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಎಐ ತನ್ನ ಛಾಪನ್ನು ಮೂಡಿಸಲಿದೆ, ಒಟ್ಟಾರೆಯಾಗಿ ಬದುಕನ್ನು ಮತ್ತಷ್ಟು ಮೃದ್ಧವಾಗಿಸಲಿದೆ.


ಸಮಸ್ಯೆಗಳಿಗೆ ಪರಿಹಾರಗಳನ್ನು ತ್ವರಿತವಾಗಿ ಮತ್ತು ನಿಖರವಾಗಿ ನೀಡಲಿದೆ. ಹೀಗಾದಾಗ ದೈನಂದಿನ ಜೀವನ ಸುಲಲಿತ. ಇವೆಲ್ಲದರ ನಡುವೆ, ಇನ್ನು ಕೆಲವೇ ವರ್ಷಗಳಲ್ಲಿ ದೇಶದ ಐಟಿ ವಲಯವು ಬಹುತೇಕ ಉದ್ಯೋಗಗಳನ್ನು ಕಳೆದುಕೊಳ್ಳಲಿದೆ ಎನ್ನುವ ಸುದ್ದಿಯು ತಳಮಳವನ್ನು ಸೃಷ್ಟಿಸಿದೆ.

ಆದರೆ ಎಐ ಕ್ಷೇತ್ರದ ತಜ್ಞರು ಹೇಳುವಂತೆ, ಎಐ ತಂತ್ರಜ್ಞಾನದ ಜತೆಗೆ ಐಟಿ ಉದ್ಯಮವೂ ಮತ್ತಷ್ಟು ಬೆಳೆಯಲಿದೆ. ಹೀಗಾಗಿ ಎಐ ತಂತ್ರಜ್ಞಾನವು ಕೆಲಸಗಳನ್ನು ಕಸಿಯಲಿದೆ ಎನ್ನುವುದನ್ನು ಒಪ್ಪಲಾಗದು. ಆದರೆ ಕಾಲಕ್ಕೆ ತಕ್ಕಂತೆ ಕೌಶಲವನ್ನು ನವೀಕರಿಸಿಕೊಂಡರೆ ಮಾತ್ರವೇ ಚಲಾವಣೆಯಲ್ಲಿರಲು ಸಾಧ್ಯ ಎಂಬ ಸತ್ಯವನ್ನು ನಾವೆಲ್ಲರೂ ಅರಿಯ ಬೇಕಾಗಿದೆ.

ಮಾಡುವ ಉದ್ಯೋಗಗಳ ಸ್ವರೂಪವು ನಿರಂತರ ಬದಲಾಗುವುದು ಐಟಿ ಉದ್ಯಮದ ಪ್ರಮುಖ ಅಂಶ. ಹೀಗಾಗಿ, ಈಗಿನ ಎಐ ತಂತ್ರಜ್ಞಾನವು ಐಟಿ ಕ್ಷೇತ್ರದ ವಿಸ್ತರಿತ ಭಾಗವಾಗಿದೆ ಮತ್ತು ಐಟಿ ಕ್ಷೇತ್ರದ ಹೊಸತನದ ರೂಪವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

ಹೀಗೆ ವ್ಯಾಪಕವಾಗಿ ಬದಲಾಗುತ್ತಿರುವ ಸನ್ನಿವೇಶಕ್ಕೆ ಹೊಂದಿಕೊಂಡು ಮುನ್ನಡೆಯಲೆಂದು, ನಮ್ಮ ಚಿಂತನೆ ಮತ್ತು ಕೌಶಲಗಳಲ್ಲಿ ಅಪ್‌ಗ್ರೇಡ್ ಮಾಡಿಕೊಳ್ಳಬೇಕಿದೆ. ಡೇಟಾದ





ಸಮರ್ಪಕ ಅರಿವು ಬೆಳೆಸಿಕೊಂಡು, ಎಐ ತಂತ್ರಜ್ಞಾನವನ್ನು ವಿವೇಚನಾಯುತವಾಗಿ ಬಳಸುವ ಉದ್ಯೋಗಿಗಳು ಮತ್ತು ಸಂಸ್ಥೆಗಳು ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿ ನಿಲ್ಲುವುದು ಕಟ್ಟಿಟ್ಟಬುತ್ತಿ.

ಆದ್ದರಿಂದ, ಭಾರತದ ಐಟಿ ಉದ್ಯಮವು ಎಐ ಅನ್ನು ಬೆದರಿಕೆ ಎಂದು ಭಾವಿಸದೆ, ಕೌಶಲವನ್ನು ಮೇಲ್ದರ್ಜೆಗೇರಿಸಿಕೊಳ್ಳುವ ಸುವರ್ಣಾವಕಾಶ ಎಂದು ಭಾವಿಸಬೇಕು ಎನ್ನುತ್ತಾರೆ ಎಐ ತಜ್ಞರು. ಜಗತ್ತಿನ ವಿವಿಧ ದೇಶಗಳಿಗೆ ಅನೇಕ ಐಟಿ ಸೇವೆಗಳನ್ನು ರಫ್ತು ಮಾಡುವಲ್ಲಿ ಭಾರತ ಮುಂಚೂಣಿಯಲ್ಲಿದೆ.

ಎಐ ಅಲೆಯಿಂದ ಬಚಾವಾಗಲು, ಎಐ ತಂತ್ರಜ್ಞಾನದ ಅಭಿವೃದ್ಧಿ, ಎಐ ಆಧಾರಿತ ಸೇವೆ ಮತ್ತು ಎಐ ಉತ್ಪನ್ನಗಳ ರಫ್ತಿನ ಕುರಿತು ಗಮನಹರಿಸುವ ಅಗತ್ಯವಿದೆ. ಏಕೆಂದರೆ, ತಂತ್ರಜ್ಞಾನ ಬದಲಾದಾಗೆಲ್ಲಾ ಜಗತ್ತು ಕಂಪಿಸಿದೆ, ಅಚ್ಚರಿಯೆಂದರೆ ಅಂಥ ಬದಲಾವಣೆಗಳಿಗೆ ಅದು ಕ್ಷಿಪ್ರವಾಗಿ ಒಗ್ಗಿಕೊಂಡು ಮುನ್ನಡೆದಿದೆ. ಐಟಿ ಉದ್ಯಮವು ತಾನು ಬದಲಾಗುವುದರ ಜತೆಗೆ ಮುಂದಿನ ಪೀಳಿಗೆಯನ್ನೂ ಇಂಥ ಬದಲಾವಣೆಗೆ ಸಜ್ಜುಗೊಳಿಸುವಂತಾಗಲು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲೂ ಸೂಕ್ತ ಮಾರ್ಪಾಟು ಆಗಬೇಕು.

ಎಐ ಎಂಬುದು ಜಗದಗಲ ಕಾಡ್ಗಿಚ್ಚಿನಂತೆ ವ್ಯಾಪಿಸುತ್ತಿರುವ ಈ ಕಾಲಘಟ್ಟದಲ್ಲಿ ನಮ್ಮೆಲ್ಲರ ಸುರಕ್ಷತೆಯ ಜವಾಬ್ದಾರಿಯನ್ನು ಮರೆಯಬಾರದು. ಎಐ ಎಷ್ಟೇ ಪ್ರಬಲವಾಗಿದ್ದರೂ, ಕರಾರುವಾಕ್ಕಾಗಿದ್ದರೂ, ಯಾವುದೇ ವಿಚಾರದಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ಮನುಷ್ಯರದ್ದೇ ಆಗಿರಬೇಕು. ತಂತ್ರಜ್ಞಾನವು ಬೆಳೆದಂತೆ ಅದರ ದುರುಪಯೋಗದ ಪ್ರಮಾಣವೂ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆ.

ಆದ್ದರಿಂದ ಡೀಪ್ ಫೇಕ್, ಡಿಜಿಟಲ್ ಅರೆಸ್ಟ್ ಅಪರಾಧಗಳು, ಭಯೋತ್ಪಾದಕ ಚಟುವಟಿಕೆಗಳು ಮುಂತಾದ ಸಮಾಜಘಾತುಕ ವಿಚಾರಗಳಲ್ಲಿ ಎಐನ ದುರ್ಬಳಕೆಯನ್ನು ತಡೆಯುವ ಕಠಿಣ ಕಾನೂನುಗಳು ಜಾರಿಯಾಗಬೇಕು.

ರೇಡಿಯೋ, ಟಿವಿ, ದೂರವಾಣಿ, ಕಂಪ್ಯೂಟರ್, ಮೊಬೈಲ್, ಇಂಟರ್‌ನೆಟ್, ಸಾಫ್ಟ್‌ವೇರ್, ವಿವಿಧ ಆಪ್‌ಗಳು ಮತ್ತು ಈಗ ಎಐ ತಂತ್ರಜ್ಞಾನದ ತನಕ ಜಗತ್ತು ಬೆಳೆದುಬಂದಿದೆ. ಯಾವುದೇ ಹೊಸ ತಂತ್ರಜ್ಞಾನವಿರಲಿ, ಅದೊಂದು ಆಯುಧದಂತೆ; ಅದರಿಂದ ಒಳಿತು ಇರುವಂತೆ ಕೆಡುಕೂ ಇರುತ್ತದೆ. ಆಯುಧವನ್ನು ಬಳಸುವವರಿಗೆ ವಿವೇಚನೆ ಇರಬೇಕಷ್ಟೇ. ಎಐ ಎನ್ನುವ ಆಯುಧವೂ ಜಗದ ಒಳಿತಿಗಾಗಿ ಮಾತ್ರವೇ ಬಳಕೆಯಾಗಬೇಕು. ತಂತ್ರಜ್ಞಾನವು ಮನುಕುಲದ ಸೇವೆಗಾಗಿ ಇರಬೇಕೇ ವಿನಾ, ಅದು ಮನುಕುಲಕ್ಕೇ ಅಸ್ತಿತ್ವಕ್ಕೇ ಧಕ್ಕೆ ತರಬಾರದು!

ಎಐಯನ್ನು ಕಾರ್ಯತಂತ್ರದ ದೃಷ್ಟಿಕೋನದಿಂದ ನೋಡಿ, ಪ್ರಜ್ಞಾಪೂರ್ವಕವಾಗಿ ಬಳಸಿದಾಗ, ಅದು ನಮ್ಮೆಲ್ಲರ ಒಳಿತಿಗೆ ಮತ್ತು ಅಭಿವೃದ್ಧಿಯ ವಿಚಾರಗಳಿಗೆ ಸೂಕ್ತ ಪರಿಹಾರವನ್ನು ಒದಗಿಸಿ, ಹೊಸ ಆರ್ಥಿಕ ಮತ್ತು ಔದ್ಯೋಗಿಕ ಅವಕಾಶಗಳನ್ನು ಸೃಷ್ಟಿಸಲಿದೆ.

ಎಲ್ಲರನ್ನೂ ಒಳಗೊಂಡ ಪ್ರಗತಿ ಮತ್ತು ನವೀನ ಅವಕಾಶಗಳ ಲಭ್ಯತೆಗೆ ಎಐ ತಂತ್ರಜ್ಞಾನವು ದಿಕ್ಸೂಚಿಯಾಗಲಿ. 2047ರ ವಿಕಸಿತ ಭಾರತದ ಗುರಿ ತಲುಪಲು ಎಐ ತಂತ್ರಜ್ಞಾನವು ದೀವಟಿಗೆಯಾಗಲಿ.

**- ರವೀ** ಸಜಂಗದ್ದೆ

# ಅಂಡಮಾನ್ ಜರವಾ ಬುಡಕಟ್ಟಿನವರ ಅಶ್ವಿನಿ ದೇವತೆ ಡಾ.ರತನ್ ಚಂದ್ರಕರ್

**» ಸುಮಾರು 150 ವರ್ಷಗಳಿಗೂ ಹೆಚ್ಚು ಕಾಲ ಹೊರಗಿನ ಜಗತ್ತನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದ, ಆಧುನಿಕತೆಯ ನೆರಳು ಕಂಡರೆ ತಮ್ಮ ಬಾಣಗಳಿಂದ ದಾಳಿ ಮಾಡುತ್ತಿದ್ದ ಜರವಾ ಬುಡಕಟ್ಟು ಜನಾಂಗದವರೊಡನೆ ಸಂಪರ್ಕ ಸಾಧಿಸಲು ಸರ್ಕಾರ ಮುಂದಾಗಿತ್ತು. ಆದರೆ, ಅದು ಸುಲಭದ ಮಾತಾಗಿರಲಿಲ್ಲ. ಈ ಕೆಲಸವನ್ನು ಸಾಧಿಸಲು ದೈತ್ಯ ಮನಸ್ಸಿನ ಒಬ್ಬ ಸಣ್ಣ ಆಕಾರದ ಮನುಷ್ಯ ಅಂಡಮಾನ್‌ನ ತೀರಕ್ಕೆ ಬಂದಿಳಿದರು. ಅವರೇ ಡಾ.ರತನ್ ಚಂದ್ರಕರ್.**

ಒಂದೊಳ್ಳೆ ಮಾತು 1998ರ ಸಮಯ ಅಂಡಮಾನ್‌ನ ದಟ್ಟ ಕಾಡುಗಳ ನಡುವೆ ಬೀಸುವ ಗಾಳಿಯಲ್ಲಿ ಭಯ ಮತ್ತು ಅಪನಂಬಿಕೆಯ ವಾಸನೆಯಿತ್ತು. ಸುಮಾರು 150 ವರ್ಷಗಳಿಗೂ ಹೆಚ್ಚು ಕಾಲ ಹೊರಗಿನ ಜಗತ್ತನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದ, ಆಧುನಿಕತೆಯ ನೆರಳು ಕಂಡರೆ ತಮ್ಮ ಬಾಣಗಳಿಂದ ದಾಳಿ ಮಾಡುತ್ತಿದ್ದ ಜರವಾ ಬುಡಕಟ್ಟು ಜನಾಂಗದವರೊಡನೆ ಸಂಪರ್ಕ ಸಾಧಿಸಲು ಸರ್ಕಾರ ಮುಂದಾಗಿತ್ತು. ಆದರೆ, ಅದು ಸುಲಭದ ಮಾತಾಗಿರಲಿಲ್ಲ. ಈ ಕೆಲಸವನ್ನು ಸಾಧಿಸಲು ದೈತ್ಯ ಮನಸ್ಸಿನ ಒಬ್ಬ ಸಣ್ಣ ಆಕಾರದ ಮನುಷ್ಯ ಅಂಡಮಾನ್‌ನ ತೀರಕ್ಕೆ ಬಂದಿಳಿದರು. ಅವರೇ ಡಾ.ರತನ್ ಚಂದ್ರಕರ್.

ಜರವಾ ಜನಾಂಗದವರು ಹೊರಗಿನವರನ್ನು ತಮ್ಮ ಸಂಸ್ಕೃತಿಯ ಶತ್ರುಗಳೆಂದೇ ಭಾವಿಸಿದ್ದರು. ಅವರು ಯಾರನ್ನೂ ಹತ್ತಿರ ಸೇರಿಸುತ್ತಿರಲಿಲ್ಲ. ಆದರೆ ಡಾ.ಕರ್ ಅವರು ಅಲ್ಲಿಗೆ ಹೋದದ್ದು ಜರವಾ ಬುಡಕಟ್ಟು ಜನಾಂಗದವರಿಗೆ ನೆರವಾಗಲು, ಹೀಗಾಗಿ ತೆಂಗಿನಕಾಯಿ, ಬಾಳೆಹಣ್ಣುಗಳು ಮತ್ತು ಅಪಾರವಾದ ತಾಳ್ಮೆಯನ್ನು ಹೊತ್ತು ಅವರು ಅಂಡಮಾನ್ ಪ್ರವೇಶಿಸಿದರು.

ಆರಂಭದಲ್ಲಿ ಜರವಾಗಳು ಇವರನ್ನು ಅನುಮಾನದಿಂದ ನೋಡಿದರು. ಆದರೆ ಡಾ.ಕರ್ ಅವರು ಜರವಾಗಳ ಭಾಷೆಯನ್ನು ಕಲಿಯಲು ಪ್ರಯತ್ನಿಸಿದರು, ಅವರ ಜೀವನಶೈಲಿಯನ್ನೂ ಅಳವಡಿಸಿಕೊಂಡರು. ಅವರಲ್ಲಿ ಒಬ್ಬರಾಗಿ ಬೆರೆತರು. ಹಸಿವಿನಿಂದಿದ್ದವರಿಗೆ ಆಹಾರ ನೀಡುತ್ತಾ, ಅಕ್ಕರೆ ಗೌರವದೊಂದಿಗೆ ಹತ್ತಿರವಾಗುತ್ತಾ ಹೋದರು.

ಹೊರಗಿದ ಪ್ರಪಂಚದ ಸಂಪರ್ಕವೇ ಇಲ್ಲದ



ಆ 150 ವರ್ಷಗಳ ಮೌನವನ್ನು ಅವರು ತಮ್ಮ ಸರಳತೆಯಿಂದ ಮುರಿದರು. 1999ರಲ್ಲಿ ಜರವಾ ಬುಡಕಟ್ಟಿಗೆ ಭೀಕರವಾದ ದಡಾರ ರೋಗ ಅಪ್ಪಳಿಸಿತು. ಹೊರಗಿನ ಸಂಪರ್ಕವಿಲ್ಲದ ಕಾರಣ ಅವರಲ್ಲಿ ರೋಗ ನಿರೋಧಕ ಶಕ್ತಿ ತೀರಾ ಕಡಿಮೆಯಿತ್ತು.

ಇಡೀ ಜನಾಂಗವೇ ಅಳಿವಿನ ಅಂಚಿಗೆ ಬಂದು ನಿಂತಿತ್ತು. ಡಾ.ರತನ್ ಚಂದ್ರಕರ್ ಅವರು ಅಕ್ಷರಶಃ ಹಗಲಿರುಳು ಇವರ ಶುಶ್ರೂಷೆ ಮಾಡಿದರು. ಬುಡಕಟ್ಟಿನ ಗುಡಿಸಲುಗಳಲ್ಲಿ ವಾಸ್ತವ್ಯ ಹೂಡಿ, ಪ್ರತಿಯೊಬ್ಬರಿಗೂ ಚಿಕಿತ್ಸೆ ನೀಡಿದರು. ಆಧುನಿಕ ವೈದ್ಯಕೀಯದ ಮೇಲಿದ್ದ ಭಯವನ್ನು ಹೋಗಲಾಡಿಸಿ, ಅವರನ್ನು ಸಾವಿನ ದವಡೆಯಿಂದ ಪಾರು ಮಾಡಿದರು.

ಅಂದು ಡಾ.ಕರ್ ಅಲ್ಲಿರದಿದ್ದರೆ, ಇಂದು ಜರವಾ ಜನಾಂಗ ಇತಿಹಾಸದ ಪುಟಗಳಲ್ಲಿ ಸೇರಿ ಹೋಗಿರುತ್ತಿತ್ತು. ಇದಕ್ಕಾಗಿ ಡಾ. ರತನ್ ಚಂದ್ರಕರ್ ಅವರನ್ನು ಜರವಾದ ಜೀವದಾತ ಎನ್ನುತ್ತಾರೆ. ಅವರು ತಮ್ಮ ಅನುಭವಗಳನ್ನು ಮತ್ತು ಜರವಾ ಬುಡಕಟ್ಟು ಜನರ ಸಂಸ್ಕೃತಿಯನ್ನು ದ ಜರವಾಸ್ ಆಫ್ ದಿ ಅಂಡಮಾನ್ಸ್ ಎಂಬ ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಅವರು ತಮ್ಮ ವೃತ್ತಿಜೀವನದ ಬಹುಭಾಗವನ್ನು ಅಂಡಮಾನ್‌ನಲ್ಲಿ ಕಳೆದಿದ್ದರೂ, ಪ್ರಸ್ತುತ ನಿವೃತ್ತರಾಗಿದ್ದು ಕರ್ನಾಟಕದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬದಲಾವಣೆಯು ಕೇವಲ ಅಧಿಕಾರ ಅಥವಾ ಆದೇಶದಿಂದ ಬರುವುದಿಲ್ಲ, ನಿಜವಾದ ಬದಲಾವಣೆ ಆರಂಭವಾಗುವುದು ವಿನಮ್ರತೆಯಿಂದ.

ಒಬ್ಬ ವೈದ್ಯನಾಗಿ ಡಾ.ಕರ್ ಅವರಿಗೆ ಎಸಿ ರೂಮಿನಲ್ಲಿ ಆರಾಮವಾಗಿ ಕೆಲಸ ಮಾಡುವ ಅವಕಾಶವಿತ್ತು. ಆದರೆ ಅವರು ಆಯ್ದುಕೊಂಡದ್ದು ಕಠಿಣವಾದ ಕಾಡಿನ ಹಾದಿಯನ್ನು. ಸರ್ಕಾರವು ಇವರ ಅಪ್ರತಿಮ ಸೇವೆಯನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಆದರೆ ಡಾ.ಕರ್ ಅವರಿಗೆ ಸಿಕ್ಕ ದೊಡ್ಡ ಪ್ರಶಸ್ತಿ ಎಂದರೆ, ದಶಕಗಳ ಕಾಲ ಮನುಷ್ಯರನ್ನು ಕಂಡು ಓಡುತ್ತಿದ್ದ ಜರವಾ ಮಗುವೊಂದು ಅವರ ಕೈಹಿಡಿದು ನಕ್ಕ ಆ ಕ್ಷಣ.

ಒಮ್ಮೆ ಯೋಚಿಸಿ ನೋಡಿ ಯಾರಾದರೂ ಸಹಾಯ ಕೇಳಿ ಬಂದಾಗ ನಾವು ಅವರಿಗೆ ನಮ್ಮ ಸಮಯ, ತಾಳ್ಮೆಯಿಂದ ಕಿವಿಯಾಗುವುದು ಅಥವಾ ನೆರವಾಗಲು ಎಷ್ಟು ಬಾರಿ ಮನಸ್ಸು ಮಾಡುತ್ತೇವೆ? ಅನೇಕ ಬಾರಿ ನೆಪಗಳನ್ನು ಹೂಡಿ ಅವರ ಒಡನಾಟವನ್ನೇ ಬಿಟ್ಟು ಬಿಡುತ್ತೇವೆ. ಆದರೆ ಸಂಬಂಧವೇ ಇಲ್ಲದ ಒಂದಿಡೀ ಬುಡಕಟ್ಟು ಜನಾಂಗಕ್ಕಾಗಿ ತಮ್ಮ ಆಯಸ್ಸಿನ ಬಹುಪಾಲನ್ನು ಮೀಸಲಾಗಿಟ್ಟು ಸೇವೆ ಮಾಡಿದ ಡಾ.ರತನ್ ಚಂದ್ರಕರ್‌ರಂತಹ ದೇವತಾ ಮನುಷ್ಯರು ಇದೇ ಭೂಮಿಯಲ್ಲಿ ಇದ್ದಾರೆ ಎಂದರೆ ನಂಬಲು ಸಾಧ್ಯವೇ? ಇನ್ನಾದರೂ ಮನುಷ್ಯರಾಗಿ ಬದುಕುವ ಪ್ರಯತ್ನ ಮಾಡೋಣ. ನಾವು ಯಾರಿಗಾದರೂ ಸಹಾಯ ಮಾಡಬೇಕೆಂದಿದ್ದರೆ ಮೊದಲು ಅವರ ಹೃದಯವನ್ನು ಗೆಲ್ಲಬೇಕು. ನಂಬಿಕೆ ಇಲ್ಲದ ಜಾಗದಲ್ಲಿ ಔಷಧವೂ ಕೆಲಸ ಮಾಡದು.

**- ರೂಪಾ** ಗುರುರಾಜ್

**1960ರ ಒಲಿಂಪಿಕ್ಸ್ ವಿಲ್ಮಾಳ ಜೀವನದ ಅತ್ಯುನ್ನತ ಶಿಖರ. ಕೇವಲ 11 ಸೆಕೆಂಡುಗಳಲ್ಲಿ 100 ಮೀಟರ್ ಗುರಿ ತಲುಪಿ ವಿಶ್ವದಾಖಲೆ ನಿರ್ಮಿಸಿದಳು. 200 ಮೀಟರ್ ಓಟದಲ್ಲಿಯೂ ಚಿನ್ನ 4★100 ಮೀಟರ್ ರಿಲೇನಲ್ಲಿ ಅಂತಿಮ ಓಟಗಾರ್ತಿಯಾಗಿ ಓಡಿದ ವಿಲ್ಮಾ, ಅಮೆರಿಕ ತಂಡಕ್ಕೆ ಜಯ ತಂದುಕೊಟ್ಟಳು.**

# ಭವಿಷ್ಯವಾಣಿಯನ್ನು ಸುಳ್ಳು ಮಾಡಿದ ಮಿಂಚಿನ ಆಟಗಾರ್ತಿ ವಿಲ್ಮಾ ರುಡಾಲ್ಫ್

ವಿಲ್ಮಾ ರುಡಾಲ್ಫ್ ಜನಿಸಿದ್ದು 1940ರಲ್ಲಿ, ಅಮೆರಿಕದ ಟೆನ್ನೆಸ್ಸೀಯಲ್ಲಿ ತೀವ್ರ ವರ್ಣಭೇದ ನೀತಿ ಇದ್ದ ಕಾಲದಲ್ಲಿ, ಬಡತನ ಮತ್ತು ಅನಾರೋಗ್ಯದ ನಡುವೆ ಆಕೆಯನ್ನು ಪೋಲಿಯೋ ಮಾತ್ರವಲ್ಲದೆ, ನ್ಯುಮೋನಿಯಾ ಮತ್ತು ಸ್ಕಾರ್ಲೆಟ್ ಜ್ವರವೂ ಬಾಧಿಸಿತ್ತು.


ತಾಯಿಯು ವಿಲ್ಮಾಳನ್ನು ಪ್ರತಿ ವಾರ 80 ಮೈಲಿ ದೂರದ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದೊಯ್ಯುತ್ತಿದ್ದರು. ಅಷ್ಟೇ ಅಲ್ಲದೆ, ಮನೆಯವರೆಲ್ಲರೂ ಸರದಿಯಂತೆ ದಿನಕ್ಕೆ 4 ಬಾರಿ ವಿಲ್ಮಾಳ ಕಾಲುಗಳನ್ನು ಮಸಾಜ್ ಮಾಡುತ್ತಿದ್ದರು. ಆಕೆಯ ಕಾಲುಗಳಿಗೆ ಬ್ರೇಸ್ ಹಾಕಿದ್ದರು. ಕಷ್ಟಪಟ್ಟು ನಡೆಯುತ್ತಿದ್ದ ಹುಡುಗಿಗೆ ಇದೆಲ್ಲವೂ ಬಂಧನವಾಯಿತು.

9ನೇ ವಯಸ್ಸಿಗೆ ಅವಳು ಬ್ರೇಸ್ ಅನ್ನು ಕಿತ್ತು ಹಾಕಿದಳು. ಇನ್ನು ಮುಂದೆ ನಾನು ಯಾರ ಸಹಾಯವೂ ಇಲ್ಲದೆ ನಡೆಯುತ್ತೇನೆ, ಅಷ್ಟೇ ಅಲ್ಲ ಓಡಿ ತೋರಿಸುತ್ತೇನೆ ಎಂದು ಹಠ ತೊಟ್ಟಳು. ಅವಳಿಗೆ ಬೆಂಬಲವಾಗಿ ಅವಳ ತಾಯಿ ಮತ್ತು ಕುಟುಂಬ ಸದಾ ಇತ್ತು.

ಅದೇ ಹಠದಲ್ಲಿ 13ನೇ ವಯಸ್ಸಿನಲ್ಲಿ ಓಟದ ಸ್ಪರ್ಧೆಯಲ್ಲಿ ಕೊನೆಯವಳಾಗಿ ಬಂದಾಗ ವಿಲ್ಮಾ ಕುಗ್ಗಲಿಲ್ಲ. ಸೋಲನ್ನೇ ಗೆಲುವಿನ ಮೆಟ್ಟಿಲನ್ನಾಗಿ ಮಾಡಿಕೊಂಡಳು. ಟೆನ್ನೆಸ್ಸೀ ಸ್ಟೇಟ್ ಯೂನಿವರ್ಸಿಟಿಯಲ್ಲಿ ಕೋಚ್ ಎಡ್ ಟೆಂಪಲ್ ಅವರ ಮಾರ್ಗದರ್ಶನದಲ್ಲಿ ಆಕೆ ತನ್ನ ವೇಗವನ್ನು ಹೆಚ್ಚಿಸಿಕೊಂಡಳು. 16ನೇ ವಯಸ್ಸಿನ (1956ರ ಮೆಲ್ಬೋರ್ನ್ ಒಲಿಂಪಿ) ರಿಲೇ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದು ತನ್ನ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿದಳು.

1960ರ ಒಲಿಂಪಿಕ್ಸ್ ವಿಲ್ಮಾಳ ಜೀವನದ ಅತ್ಯುನ್ನತ ಶಿಖರ. ಕೇವಲ 11 ಸೆಕೆಂಡುಗಳಲ್ಲಿ 100 ಮೀಟರ್ ಗುರಿ ತಲುಪಿ ವಿಶ್ವ ದಾಖಲೆ ನಿರ್ಮಿಸಿದಳು. 200 ಮೀಟರ್ ಓಟದಲ್ಲಿಯೂ ಚಿನ್ನ 4★100 ಮೀಟರ್ ರಿಲೇನಲ್ಲಿ ಅಂತಿಮ ಓಟಗಾರ್ತಿಯಾಗಿ ಓಡಿದ ವಿಲ್ಮಾ, ಅಮೆರಿಕ ತಂಡಕ್ಕೆ ಜಯ ತಂದುಕೊಟ್ಟಳು.

ಒಂದೇ ಒಲಿಂಪಿಕ್ಸ್‌ನಲ್ಲಿ 3 ಚಿನ್ನದ ಪದಕ ಗೆದ್ದ ಮೊದಲ ಅಮೆರಿಕನ್ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರಳಾದಳು. ವಿಲ್ಮಾ ಟ್ರ್ಯಾಕ್ ಮೇಲೆ ಮಾತ್ರವಲ್ಲದೆ, ಸಮಾಜದಲ್ಲೂ ಬದಲಾವಣೆ ಬಯಸಿದ್ದಳು. ರೋಮ್‌ನಿಂದ ಹಿಂದಿರುಗಿದಾಗ ತನಗೆ ನೀಡಿದ ಸ್ವಾಗತ ಸಮಾರಂಭದಲ್ಲಿ ಕಪ್ಪು ಮತ್ತು ಬಿಳಿ ಜನರನ್ನು ಪ್ರತ್ಯೇಕವಾಗಿ ಕೂರಿಸಬಾರದು ಎಂದು ಪಟ್ಟು ಹಿಡಿದಳು.



ಆಕೆಯ ಹಠದ ಫಲವಾಗಿ ಟೆನ್ನೆಸ್ಸೀಯ ಇತಿಹಾಸದ ಮೊದಲ ಬಾರಿಗೆ ಎರಡೂ ಜನಾಂಗದವರು ಒಂದೇ ಕಡೆ ಸೇರಿ ಆಕೆಯನ್ನು ಗೌರವಿಸಿದರು. ಜಗತ್ತಿನ ಅತಿ ವೇಗದ ಮಹಿಳೆ ಎಂಬ ಗೌರವ ಪಡೆದ ವಿಲ್ಮಾಗೆ, ಜೇಮ್ಸ್ ಇ. ಸುಲ್ಲಿವಾನ್ ಪ್ರಶಸ್ತಿ, ಅಮೆರಿಕದ ಒಲಿಂಪಿಕ್ ಹಾಲ್ ಆಫ್ ಫೇಮ್ ಪ್ರಶಸ್ತಿಗಳು ಸಮಯೋಚಿತವಾಗಿ ದೊರೆತವು.

ನೀನು ಎಲ್ಲವನ್ನೂ ಸಾಧಿಸಬಲ್ಲೆ ಎಂದು ನನ್ನ ತಾಯಿ ನನಗೆ ನಂಬಿಸಿದರು, ನಾನು ಅದನ್ನು ಕಾರ್ಯಗತಗೊಳಿಸಿದೆ ಎಂದು ಆತ್ಮವಿಶ್ವಾಸದಿಂದ ಹೇಳಿದಳು ವಿಲ್ಮಾ ರುಡಾಲ್ಫ್.

ಆಕೆಯ ಜೀವನ ನಮಗೆ ಕಲಿಸುವ ಪಾಠವೊಂದೇ- ಅದೆಂದರೆ, ನಮ್ಮ ದೈಹಿಕ ಮಿತಿಗಳಿಗಿಂತ ನಮ್ಮ ಮಾನಸಿಕ ಶಕ್ತಿ ಬಹಳ ದೊಡ್ಡದು.

ಪರೀಕ್ಷೆಗಳ ಸಮಯವಿದು, ಮಕ್ಕಳು ಅದಕ್ಕಾಗಿ ತಯಾರಿ ಮಾಡಿಕೊಳ್ಳುತ್ತಿರುತ್ತಾರೆ. ತಂದೆ-ತಾಯಿಗಳಾಗಿ ನಾವು ಅವರಿಗೆ ನೀವು ಖಂಡಿತ ಸಾಧಿಸಬಹುದು ಎಂಬ ಧೈರ್ಯ ತುಂಬಿ ಜತೆಗಿದ್ದರೆ ಅವರು ಆತ್ಮವಿಶ್ವಾಸದಿಂದ ಓದಿ ಒಳ್ಳೆಯ ಅಂಕಗಳನ್ನು ಗಳಿಸಲು ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ಅವರು ಮಾಡಿದ ತಪ್ಪುಗಳ ಪಟ್ಟಿ ಮಾಡುತ್ತಾ, ಅವರಿಗೆ ಅದನ್ನು ನೆನಪಿಸಿ ಆತ್ಮ ವಿಶ್ವಾಸವನ್ನು ಕುಗ್ಗಿಸಿದರೆ, ಅವರು ಖಂಡಿತ ಸಮಾಧಾನದಿಂದ ಓದಿ ಸಮಚಿತ್ತದಿಂದ ಪರೀಕ್ಷೆ ಬರೆಯಲು ಸಾಧ್ಯವಾಗುವುದಿಲ್ಲ.


ಅನೇಕ ಮನೆಗಳಲ್ಲಿ ತಂದೆ-ತಾಯಿಗಳು ಮಕ್ಕಳಿಗೆ ಹೆದರಿಸಿ ಹದ್ದುಬಸ್ತಿನಲ್ಲಿ ಇಟ್ಟು ಕೊಳ್ಳುವುದೇ ಕರ್ತವ್ಯ ಎಂದುಕೊಂಡಿದ್ದಾರೆ. ಆದರೆ ಮಕ್ಕಳ ಮನಸ್ಸು ಬಹಳ ಸೂಕ್ಷ್ಮ. ಒಂದು ಪ್ರೀತಿ ಮಾತಿನಿಂದ, ಆತ್ಮೀಯ ನುಡಿಯಿಂದ ಅವರ ಆತ್ಮವಿಶ್ವಾಸವನ್ನ ಜಾಗೃತಗೊಳಿಸಬಹುದು. ಅದೇ ಒಂದು ಕೊಂಕು ಮಾತಿನಿಂದ ಅವರ ಆಸಕ್ತಿಯನ್ನು ಕೊಂದು ಬಿಡಲೂಬಹುದು. ಆದ್ದರಿಂದಲೇ ಅವರನ್ನು ಹೇಗೆ ಒಳ್ಳೆಯ ರೀತಿಯಲ್ಲಿ ಪ್ರೇರೇಪಿಸಬೇಕು ಎಂದು ನಾವು ತಿಳಿದಿರಬೇಕು. ಮಕ್ಕಳನ್ನು ಭಯದಿಂದ ಅಲ್ಲ ಭರವಸೆಯಿಂದ ಬೆಳೆಸಬೇಕು.

ಆಕಾಶಕ್ಕೆ ಹಾರಲು ರೆಕ್ಕೆಗಳಿಗೆ ಕಸುವು ತುಂಬುವ ಶಕ್ತಿ ತಂದೆ, ತಾಯಿ, ಗುರುಗಳಿಗಿದೆ. ಅದನ್ನು ಸಮಯೋಚಿತವಾಗಿ ಉಪಯೋಗಿಸಬೇಕಷ್ಟೆ.

## ಶಬ್ದಗಾರುಡಿಗ ನಮ್ಮೆಲ್ಲರ ಹೆಮ್ಮೆಯ ಸಾಹಿತಿ

ಮೂಡಲ ಮನೆಯಾ ಮುತ್ತಿನ ನೀರಿನ
ಎರಕಾವ ಹೊಯ್ದಾ
ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ
ನೀ ಹೀಂಗ ನೋಡಬ್ಯಾಡ ನನ್ನ, ನೀ ಹೀಂಗ ನೋಡಿದರೆ ನನ್ನ
ತಿರುಗಿ ನಾ ಹ್ಯಾಂಗ ನೋಡಲಿ ನಿನ್ನ

ಮೇಲಿನ ಕವನದ ಸಾಲುಗಳ ಒಂದೊಂದು ಪದಗಳೂ ಮುತ್ತಿನ ಮಣಿಗಳು ಎನ್ನಬಹುದು. ಅದ್ಭುತ ಭಾವನೆಯ ಶರಧಿಯೇ ಸರಿ.ರಸವೇ ಜನನ ವಿರಸ ಮರಣ ಸಮರಸವೇ ಜೀವನ ಎಂದವರು. ಸಾಕಷ್ಟು ನೋವನ್ನೇ ಉಂಡರೂ, ನೋವಿನಲ್ಲೂ ಸಂಭ್ರಮಿಸಿ, ಕವನ ಬರೆದವರು.



ಅಂಬಿಕಾತನಯದತ್ತ ಕಾವ್ಯನಾಮದಿಂದ ಸಾಹಿತ್ಯ ಕೃಷಿಯ ನಾನಾ ಮಜಲಿನಲ್ಲಿ ತನ್ನನ್ನು ತೊಡಗಿಸಿಕೊಂಡು, ಅಪ್ಪಟ ಕನ್ನಡಾಭಿಮಾನಿಯಾಗಿ, ನಾಕುತಂತಿ ಕವನ ಸಂಕಲನಕ್ಕೆ ಅತ್ಯುನ್ನತ ಜ್ಞಾನಪೀಠ ಪ್ರಶಸ್ತಿ ಮುಡಿಗೇರಿಸಿಕೊಂಡ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ (ದ.ರಾ.ಬೇಂದ್ರೆ) ಕವನಗಳಿವು. ಬೆಂದಾವ ಬೇಂದ್ರೆ, ಆಗ್ತಾನ ಕನ್ನಡದ ಗಾರುಡಿಗರ ಮನದಾಳದ ಮಾತಿದು. ಮಾತು, ಹರಟೆ, ಬದುಕೇ ಸಾಹಿತ್ಯಮಯ. ಇಳಿದು ಬಾ ತಾಯೇ ಮರೆಯಲು ಸಾಧ್ಯವಿಲ್ಲ, ಅದ್ಭುತ. ಪಾತರಗಿತ್ತಿ ಪಕ್ಕ, ಕುಣಿಯೋಣ ಬಾರಾ, ಅಜರಾಮರ ಸಾಲುಗಳು. ಜೀವಾತ್ಮ ಪರಮಾತ್ಮ ಒಂದೇ ಎನ್ನುವ ಭಾವ ಶ್ರೀಯುತರ ಹಲವು ಕವನದಲ್ಲಿ ಕಾಣಬಹುದು. ತಮ್ಮ ಸಶಕ್ತ ಸಾಹಿತ್ಯದ ಮೂಲಕ ಇಂದಿಗೂ ಜೀವಂತ ಜಂಗಮರಂತಿರುವ ಹಿರಿಯ ಸಾಹಿತ್ಯವರೇಣ್ಯರಿವರು. ಕರ್ನಾಟಕ ಕವಿಕುಲ ತಿಲಕ, ಗೌರವ ಡಾಕ್ಟರೇಟ್, ಭಾರತ ಸರಕಾರದ ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾದವರು. ತಮ್ಮ ಪ್ರತಿಭೆಯಿಂದಲೇ ವರಕವಿ ಎನಿಸಿದವರು. ತಮ್ಮೆಲ್ಲ ರಚನೆಗಳಲ್ಲೂ ಪ್ರಕೃತಿ ವರ್ಣನೆ, ಬದುಕಿನ ಕಹಿ ಸತ್ಯಗಳು, ದೇಶಪ್ರೇಮ, ಒಲವು, ಸರಸ, ವಿರಸ, ಸಾಮಾಜಿಕ ಸ್ಥಿತಿಗತಿ, ವಿದ್ಯೆ, ಹಣಗಳಿಕೆ, ಹಣದ ಮಹಿಮೆ ಹೀಗೆ ಹತ್ತು ಹಲವು ವಿಷಯಗಳನ್ನು ನೀಡಿದವರು. ನಾಟಕಕಾರರು ಸಹ. ಕನ್ನಡ ಸಾರಸ್ವತ ಲೋಕದಲ್ಲಿ ಸಾಹಿತ್ಯದ ಮೂಲಕ ಸದಾ ಹಸಿರಾಗಿರುವ ಹಿರಿಯರು. ಲೇಖಕ, ನಾಟಕಕಾರ, ಕವಿ, ವಿಮರ್ಶಕರಾಗಿ ತಮ್ಮದೇ ಛಾಪನ್ನು ಮೂಡಿಸಿ ಮರೆಯಾದ, ಕನ್ನಡಮ್ಮನ ಮಡಿಲ ಮಗ, ಶಬ್ದಗಾರುಡಿಗ ನಮ್ಮೆಲ್ಲರ ಹೆಮ್ಮೆಯ ಸಾಹಿತಿ ದ.ರಾ.ಬೇಂದ್ರೆಯವರಿಗೆ ನಮನ.

**- ರತ್ನಾ ಕೆ ಭಟ್** ತಲಂಜೇರಿ

# ಹೃದಯದ ಭಾಷೆ ನಗು

ದಿನಾಲೂ ಬೆಳಿಗ್ಗೆ ಎದ್ದ ತಕ್ಷಣ ನನ್ನ ಮೊದಲನೆಯ ಕೆಲಸ, ರೇಡಿಯೊ ಆನ್ ಮಾಡಿ ಮಂಗಳೂರು ಆಕಾಶವಾಣಿಯಲ್ಲಿ ವಂದನಾ ಕಾರ್ಯಕ್ರಮ ಕೇಳುವುದು. ವಾರ್ತೆಯ ಬಳಿಕ, ಚಿತ್ರ ಗೀತೆ ನಂತರ ಎಫ್.ಎಮ್. ಕೇಳುವುದು ವಾಡಿಕೆ. ಹಾಗೆ ಮೊನ್ನೆ ಎಫ್.ಎಮ್.ನಲ್ಲಿ, ಆರ್.ಜೆ. ಶೃತಿ ನಗುವಿನ ಬಗ್ಗೆ ತುಂಬಾ ಚೆನ್ನಾಗಿ ವಿವರಿಸುತ್ತಿದ್ದರು. ನಗು ಯಾಕೆ ಬೇಕು, ನಗುವಿನ ಮಹತ್ವ, ವಿವಿಧ ಬಗೆಯ ನಗು ಇತ್ಯಾದಿ. ಮುಖ ಗಂಟಿಕ್ಕಲು ಅದೆಷ್ಟು ಸ್ನಾಯುಗಳ ಅವಶ್ಯಕತೆ ಇದೆ ಮತ್ತು ನಗುವುದು ಎಷ್ಟು ಸುಲಭ ಎಂಬುದನ್ನು ಚೆನ್ನಾಗಿ ಶೃತಿಯವರು ಹೇಳುತ್ತಿದ್ದರು. ತುಂಬಾ ಖುಷಿಯಾಗಿತ್ತು. ಮುಂದಿನ ಬರಹ ನಗುವಿನ ಮೇಲೆಯೇ ಬರೆಯಬೇಕು ಅಂದುಕೊಂಡೆ. ಆದರೆ ಈ ಹಿಂದೆ ನಗುವಿನ ಬಗ್ಗೆ ಅನೇಕ ಲೇಖನಗಳನ್ನು ಓದಿದ್ದೆ. ನಗು ತುಂಬಾ ಸರಳವಾದ ವಿಷಯ. ಆದರೂ ಸ್ವಲ್ಪ ಬರೆಯಬೇಕೆಂದು ಅನಿಸಿತ್ತು. ಯಾವುದಾದರೂ ಒಳ್ಳೆಯ ಭಾಷಣ, ಉಪನ್ಯಾಸ ಅಥವಾ ಉತ್ತಮ ಸ್ಪೀಕರ್ ಮಾತು ಕೇಳಿದಾಗ ಮತ್ತು ಬೆಳಗ್ಗೆ ರೇಡಿಯೊದಲ್ಲಿ ಬರುವ ಚಿಂತನಾ ಕಾರ್ಯಕ್ರಮದಲ್ಲಿ ಕೆಲವೊಂದು ಉಪಯುಕ್ತ ಮುಖ್ಯ ಅಂಶಗಳನ್ನು ಟಿಪ್ಪಣಿಯಾಗಿ ಬರೆಯುವುದನ್ನು ರೂಢಿ ಮಾಡಿಕೊಂಡಿದ್ದೇನೆ. ಯಾವಾಗಲಾದರೂ. ಸಭೆಯನ್ನು ಉದ್ದೇಶಿಸಿ ಮಾತನಾಡಲಿರುವಾಗ ಈ ಪಾಯಿಂಟ್‌ಗಳನ್ನು ಉಪಯೋಗಿಸುವುದು ನನ್ನ ವಾಡಿಕೆ. ಹಾಗೆಯೇ ಆರ್. ಜೆ. ಶೃತಿಯವರು ನಗುವಿನ ಬಗ್ಗೆ ಹೇಳಿದ ಅನೇಕ ಗಮನಾರ್ಹ ವಿಷಯಗಳನ್ನು ಕೂಡಲೇ ನೋಟ್ ಮಾಡಿಕೊಂಡೆ. ನಗು ಯಾಕೆ ಮುಖ್ಯ? ಬೇರೆಯವರ ನಗುವಿಗೆ ಕಾಯದೆ ನಾವೇ ಮೊದಲು ನಕ್ಕಾಗ ಆಗುವ ಆನಂದ ಅಪರಿಮಿತ. ನಗುವ ಮುಖವು ಸ್ನೇಹಪರತೆಯನ್ನು ತೋರಿಸುತ್ತದೆ. ಶೃತಿಯವರ ನಿರೂಪಣೆ ತುಂಬಾ ಚೆನ್ನಾಗಿತ್ತು.

ನಾವು ಸಾಮಾನ್ಯವಾಗಿ ತುಂಬಾ ಸಂತೋಷವಾದಾಗ ನಗುತ್ತೇವೆ. ನಾವು ಅಂದುಕೊಂಡಂತೆ ಏನಾದರೂ ಆದಾಗಲೂ ನಾವು ಖುಷಿ ಪಡುತ್ತೇವೆ. ಕೆಲವೊಮ್ಮೆ ಕಾಮಿಡಿ ಸಿನೆಮಾ ಅಥವಾ ಕಾರ್ಯಕ್ರಮ ನೋಡುವಾಗಲೂ ತುಂಬಾ ಆನಂದವಾಗುತ್ತದೆ. ನಗು ಸಾಂಕ್ರಾಮಿಕವಾದದ್ದು. ಕೆಲವರು ನಗುವುದು ನೋಡುವಾಗ ನಮಗೂ ನಗು ಬರುತ್ತದೆ. ಚಿಕ್ಕ ಮಗುವನ್ನು ನೋಡುವಾಗ ಎಷ್ಟೇ ಒತ್ತಡವಿರುವಾಗಲೂ ಮುಖದಲ್ಲಿ ಮಂದಹಾಸ ಮೂಡುತ್ತದೆ. ಪರಸ್ಪರ ಭೇಟಿಯಾದಾಗ ಮಾತಿಗೂ ಮೊದಲು ಪರಿಚಿತ ನಗೆಯನ್ನು ಬೀರುತ್ತೇವೆ. ನಗು ಸಂತೋಷದ ಸಂಕೇತ. ಪರಿಚಿತರೊಡನೆ ನಕ್ಕಾಗ ಪ್ರತಿ ನಗು ಸಿಗದಿದ್ದರೆ ಮನಸ್ಸಿನಲ್ಲಿ ಅನುಮಾನ, ಚಿಂತೆ, ಬೇಸರ ಉಂಟಾಗಿ ನಮ್ಮಿಂದ ಏನಾದರೂ ತಪ್ಪಾಗಿದೆಯೋ ಎಂಬ ಭಾವನೆ ಮೂಡುತ್ತದೆ. ನಗು ಅನೇಕ ಮುರಿದ ಹೃದಯಗಳನ್ನು ಒಂದುಗೂಡಿಸುವುದಲ್ಲದೆ, ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ.

ನಗಿಸುವುದು ಕೂಡ ಒಂದು ಟ್ಯಾಲೆಂಟ್. ನಾನು ರಿಯಾಲಿಟಿ ಶೋ ಎಂದೂ ನೋಡಿದವಳೇ ಅಲ್ಲ. ಮೊದಲು ಒಂದೆರಡು ಬಾರಿ ಹಿಂದಿ ಬಿಗ್ ಬಾಸ್ ನೋಡಿದ್ದೆ. ನಂತರ ಇದೆಲ್ಲಾ ಸ್ಕ್ರಿಪ್ಟೆಡ್ ಅಂತ ಗೊತ್ತಾದಾಗ ನೋಡುವುದನ್ನೇ ಬಿಟ್ಟಿದ್ದೆ. ಆದರೆ ಈ ಬಾರಿ ಪ್ರಪ್ರಥಮ ಬಾರಿಗೆ ಕನ್ನಡ ಬಿಗ್ ಬಾಸ್ ಸರಣಿಯನ್ನು ವೀಕ್ಷಿಸಿದ್ದೆ. ಎರಡು ಕಾರಣಗಳು. ಒಂದು ನಿವೃತ್ತಿಯ ಬಳಿಕ ಫ್ರೀಯಾಗಿದ್ದೆ. ಮತ್ತೊಂದು ನಮ್ಮ ಕರಾವಳಿಯ ಹುಡುಗಿ ರಕ್ಷಿತಾ ಶೆಟ್ಟಿ ಸ್ಪರ್ಧಿಯಾಗಿ ಆಯ್ಕೆಯಾದದ್ದು. ಅದರಲ್ಲಿ ಗಿಲ್ಲಿ ನಟ ಎಂಬ ಸ್ಪರ್ಧಿಯು ತನ್ನ ವಿಶಿಷ್ಟ ಹಾಸ್ಯ ಶೈಲಿಯ ಮೂಲಕ ಮನ ರಂಜಿಸುತ್ತಿದ್ದರು. ನನಗೆ ಮೊದಲನೆಯ ಸಲ ಅವರ ಪರಿಚಯವಾದರೂ, ಕಾಮಿಡಿ ಕಿಲಾಡಿಗಳು ಸೇರಿ ಹಲವಾರು ರಿಯಾಲಿಟಿ ಷೋಗಳಲ್ಲಿ ನಟಿಸಿದ ಹೆಗ್ಗಳಿಕೆ ಬೇರೆ ಇತ್ತು. ಪ್ರತಿಭಾವಂತ ಹುಡುಗ. ದಿನಾಲೂ ತನ್ನ ಅಪೂರ್ವ ಪ್ರತಿಭೆಯಿಂದ ಚುಟುಕುಗಳು, ಸಂದರ್ಭಕ್ಕೆ ತಕ್ಕಂತಹ ಜೋಕುಗಳು, ಒತ್ತಡದ ಕ್ಷಣಗಳಲ್ಲಿಯೂ ತಕ್ಷಣದ ಪ್ರತಿಕ್ರಿಯೆಗಳು, ಸನ್ನಿವೇಶಕ್ಕೆ ತಕ್ಕಂತೆ ಹಾಸ್ಯದಿಂದ ಎಲ್ಲರ ಮನೆ ಮಾತಾಗಿದ್ದರು. ತನ್ನ ಅದ್ಭುತ ಸೆನ್ಸ್ ಆಫ್ ಹ್ಯೂಮರ್‌ನಿಂದ ಎಲ್ಲರ ಮನ ಗೆದ್ದು ಬಿಗ್ ಬಾಸ್ ವಿನ್ನರ್ ಆಗಿಯೇ ಬಿಟ್ಟರು. ಸಾಮಾನ್ಯ ಕುಟುಂಬದಿಂದ ಬಂದು ತನ್ನಲ್ಲಿರುವ ಅಪ್ರತಿಮ ಪ್ರತಿಭೆಯಿಂದ ಎಲ್ಲಾ ಘಟಾನುಘಟಿಗಳನ್ನು ಹಿಂದಿಕ್ಕಿ ಟ್ರೋಫಿ ತನ್ನದಾಗಿಸಿ ಕೊಂಡಿದ್ದ. ಇದು ನಗುವಿಗಿರುವ ಶಕ್ತಿ. ಇಡೀ ಕರುನಾಡಿನ ಮನ ಗೆದ್ದಿದ್ದ. ಈ ಸೀಸನ್ ಮುಗಿಯುವಷ್ಟರಲ್ಲಿ ನಾನು ಗಿಲ್ಲಿಯ ಫ್ಯಾನ್ ಆಗಿ ಬಿಟ್ಟಿದ್ದೆ.

ಹಾಸ್ಯಕ್ಕಿರುವ ಶಕ್ತಿ ಅಪಾರ. ನಗುವಿನ ಮೂಲಕ ನಾವು ಖಂಡಿತವಾಗಿಯೂ ಇತರರ ಮನಸ್ಸನ್ನು ಗೆಲ್ಲಬಹುದು. ನಗು ನಮ್ಮ ಬದುಕನ್ನು ಸುಂದರಗೊಳಿಸುವುದಲ್ಲದೆ, ಬೇರೆಯವರ ಬದುಕಿಗೂ ಬೆಳಕು ನೀಡುತ್ತದೆ. ನಗು ಮಾನವನಿಗೆ ಬೇಕಾಗಿರುವ ಅತೀ ಅಮೂಲ್ಯ ಉಡುಗೊರೆ. ಸಂಶೋಧನೆಗಳ ಪ್ರಕಾರ ನಗುತ್ತಿರುವವರ ಆಯುಷ್ಯ, ನಗದೇ ಇರುವವರಿಗಿಂತ ಏಳು ವರ್ಷ ಅಧಿಕ ಎಂದು ಇತ್ತೀಚೆಗೆ ಓದಿದ ನೆನಪು. ನಗುವಿಗೂ ದೀರ್ಘಾಯುಷ್ಯಕ್ಕೂ ನೇರವಾಗಿ ಸಂಬಂಧ ಇಲ್ಲದಿದ್ದರೂ, ನಗು ಆರೋಗ್ಯಕರ ಜೀವನಕ್ಕೆ ನಾಂದಿಯಾಗಿರುತ್ತದೆ. ನಗುವು ಒತ್ತಡವನ್ನು ಕಡಿಮೆ ಮಾಡುವುದಲ್ಲದೆ, ಸಂತೋಷದ ಹಾರ್ಮೋನ್ ಬಿಡುಗಡೆ ಮಾಡುತ್ತದೆ. ನಗುವು ಸಂತೋಷದ ಸಂಕೇತ.

ಇಂದಿನ ಧಾವಂತದ ಜೀವನ ಶೈಲಿ, ಒತ್ತಡದ ಬದುಕು ಹಾಗೂ ಸಾಮಾಜಿಕ ಜವಾಬ್ದಾರಿಗಳ ನಡುವೆ ಮನುಷ್ಯನು ನಗುವುದನ್ನು ಮರೆತಿದ್ದಾನೆ. ತನ್ನವರಿಗಾಗಿ ಅಲ್ಪ ಸಮಯವನ್ನೂ ಮೀಸಲಾಗಿಡದೆ, ತೊಳಲಾಡುವುದನ್ನು ಕಾಣುತ್ತೇವೆ. ಗುರಿಗಳನ್ನು ಮುಟ್ಟುವ ಹಂಬಲದಲ್ಲಿ ಕುಟುಂಬಕ್ಕೆ ಹೆಚ್ಚು ಸಮಯ ನೀಡಲು ಸಾಧ್ಯವಾಗದೆ ಹೆಚ್ಚಿನ ಸಮಯ ಮುಖ ಗಂಟಿಕ್ಕಿರುವುದನ್ನು ಕಾಣಬಹುದು. ಕೆಲವರು ಗಂಭೀರವಾಗಿದ್ದರೆ ಹೆಚ್ಚು ಸ್ಥಾನಮಾನ, ಘನತೆ ಹಾಗೂ ಗೌರವ ಸಿಗುತ್ತದೆ ಎಂಬ ಭ್ರಮಾಲೋಕದಲ್ಲಿರುತ್ತಾರೆ. ಆದರೆ ನನ್ನ ಪ್ರಕಾರ, ಇದು ತಪ್ಪು ಕಲ್ಪನೆ. ಸಂದರ್ಭಕ್ಕೆ ತಕ್ಕಂತೆ ಮುಖಭಾವವನ್ನು ಬದಲಿಸಿಕೊಳ್ಳುವುದು ಅತ್ಯುತ್ತಮ. ಆದರೆ ಪ್ರವಾಸ, ಪಿಕ್ನಿಕ್, ಮದುವೆ ಸಮಾರಂಭಗಳಂತಹ ಸಂದರ್ಭಗಳಲ್ಲಿ ಸ್ವಲ್ಪ ಹಗುರವಾದ ಮನೋಸ್ಥಿತಿಯನ್ನು ಎಲ್ಲರೂ ಇಷ್ಟಪಡುತ್ತಾರೆ.



ನಗು ಅತಿಯಾದರೂ ಒಳ್ಳೆಯದಲ್ಲ. ಯಾವಾಗಲೂ ನಗುತ್ತಾ ಇರುವ ವ್ಯಕ್ತಿಯನ್ನು ಲಘುವಾಗಿ ಪರಿಗಣಿಸುವ ಸಾಧ್ಯತೆಗಳೇ ಹೆಚ್ಚು. ನನಗೇ ಈ ಅನುಭವ ತುಂಬಾ ಸಲ ಆಗಿದೆ.

ಹೆಚ್ಚಾಗಿ ಸೀರಿಯಸ್ ಆಗಿ ಇರದೆ ನನ್ನ ಮೌಲ್ಯವನ್ನು ನಾನೇ ಕಳೆದುಕೊಂಡೆ ಎಂದೇ ನನಗನಿಸಿತ್ತು. ಹಲವಾರು ಬಾರಿ ನನ್ನ ಒಳ್ಳೆಯತನವನ್ನು ದುರ್ಬಲತೆಯೆಂದೇ ಅರ್ಥೈಸಿಕೊಂಡವರೇ ಅಧಿಕ.


ಒಟ್ಟಿನಲ್ಲಿ ನಗು ಎಂಬುದು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ನಾವು ಎಷ್ಟೇ ಸುಂದರವಾಗಿ ಅಲಂಕರಿಸಿಕೊಂಡರೂ, ಆಭರಣಗಳಿಂದ ಸಿಂಗರಿಸಿಕೊಂಡರೂ ಮುಖದ ಮೇಲೆ ನಗುವಿಲ್ಲದಿದ್ದರೆ ಎಲ್ಲವೂ ವ್ಯರ್ಥ. ನಾನು ಈ ಲೇಖನ ಬರೆಯುವಷ್ಟರಲ್ಲಿ ಕಾಕತಾಳೀಯವೆಂಬಂತೆ ನಗು ನಗುತಾ ನಲಿ ನಲಿ, ಏನೇ ಆಗಲಿ ಎಂಬ ಬಂಗಾರದ ಮನುಷ್ಯ ಸಿನೆಮಾದ ಹಾಡು ಮಂಗಳೂರು ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿತ್ತು. ನಿಜಕ್ಕೂ ಹಳೆ ಹಾಡುಗಳು ಅದೆಷ್ಟು ಪ್ರೇರಣಾದಾಯಕ ಹಾಗೂ ಅರ್ಥಪೂರ್ಣ ಎಂದು ನನಗನಿಸಿತು. ನಗು ದೇವರು ಕೊಟ್ಟ ಒಂದು ವರ. ಎಲ್ಲರಲ್ಲೂ ನಗೆಯನ್ನು ಹಂಚಿ ಹಗುರಾಗೋಣ.

**- ಶೈಲಾರಾಣಿ ಬಿ,** ಮಂಗಳೂರು.

# ರಮಾಬಾಯಿ ಅವರಿಗೆ ಅಂಬೇಡ್ಕರ್ ಬರೆದ ಪತ್ರ

ರಮಾ! ಹೇಗಿದ್ದೀಯ?

ಇಂದೇಕೋ ನೀನು ಮತ್ತು ಯಶವಂತ ಬಿಡದೇ ಕಾಡುತ್ತಿದ್ದೀರಿ. ನಿನ್ನ ನೆನಪು ನನ್ನದೆಯನ್ನು ಭಾರವಾಗಿಸಿದೆ. ಕಳೆದ ಕೆಲವು ದಿನಗಳಲ್ಲಿ ನನ್ನ ಭಾಷಣಗಳು ಹೆಚ್ಚು ಚರ್ಚೆಗೊಳಗಾದವು. ಸಮ್ಮೇಳನದಲ್ಲಿ ಬಹಳ ಒಳ್ಳೆಯ ಹಾಗೂ ಫಲಪ್ರದ ಚರ್ಚೆಗಳಾದವು. ಇದನ್ನೇ ದಿನಪತ್ರಿಕೆಗಳು ನನ್ನ ಭಾಷಣದ ಬಗ್ಗೆ ಬರೆದಿರುವುದು. ಈ ಮೊದಲು ದುಂಡುಮೇಜಿನ ಪರಿಷತ್ತಿನಲ್ಲಿನ ನನ್ನ ಜವಾಬ್ದಾರಿಯ ಬಗ್ಗೆ ಯೋಚಿಸುತ್ತಿದ್ದೆ. ನನ್ನ ಕಣ್ಣ ಮುಂದೆ ನನ್ನ ದೇಶದ ಎಲ್ಲಾ ನೊಂದವರ ಚಿತ್ರಣ ಕಂಡುಬರುತ್ತಿತ್ತು. ಸಾವಿರಾರು ವರ್ಷಗಳಿಂದ ಈ ಜನ ದುಃಖದಲ್ಲಿಯೇ ಮುಳುಗಿದ್ದಾರೆ. ಈ ಧ್ವನಿಕ್ಕೆ ಚಿಕಿತ್ಸೆಯೇ ಇಲ್ಲವೆಂದು ಭಾವಿಸಿದ್ದಾರೆ. ನನಗೆ ಸಿಡಿಲು ಬಡಿದಂತಾಗುತ್ತದೆ ರಮಾ. ಆದರೂ ನಾನು ಹೋರಾಡುತ್ತೇನೆ.



ನನ್ನ ವಿಚಾರಶಕ್ತಿ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಿದೆ. ಬಹುಶಃ ನನ್ನ ಮನದಲ್ಲಿ ಅಗಾಧವಾದ ಸಂಗತಿಗಳು ಸ್ಫೋಟಿಸುತ್ತಿವೆ. ಹೃದಯ ಬಹಳ ಭಾವುಕವಾಗಿದೆ, ದಿಕ್ಕು ತೋಚದಂತಾಗಿದೆ. ನಿನ್ನ ಮತ್ತು ಮನೆಯವರ ನೆನಪು ಕಾಡಲಾರಂಭಿಸಿದೆ. ನಿನ್ನ ನೆನಪಾಗುತ್ತಲೇ ಇದೆ. ಯಶವಂತ ನೆನಪಾದ.

ಹಡಗು ಹತ್ತಿಸಲು ನೀನಲ್ಲಿಗೆ ಬಂದಿದ್ದೆ. ಅಲ್ಲಿಗೆ ಬರಬೇಡವೆಂದು ಪದೇ ಪದೇ ನಾ ಹೇಳಿದ್ದೆ. ಆದರೂ ನೀನು ನನ್ನ ಮಾತು ಕೇಳಲಿಲ್ಲ. ನನ್ನನ್ನು ಬೀಳ್ಕೊಡಲು ಬಂದೇಬಿಟ್ಟೆ. ನಾನು ದುಂಡು ಮೇಜಿನ ಪರಿಷತ್ತಿಗೆ ಹೊರಟಿದ್ದೆ. ನನ್ನನ್ನು ಜೈಕಾರದಿಂದ ಎಲ್ಲೆಡೆಯೂ ಬೀಳ್ಕೊಡಲಾಗುತ್ತಿತ್ತು. ನೀನದೆಲ್ಲವನ್ನೂ ನೋಡುತ್ತಲೇ ಇದ್ದೆ. ನಿನ್ನೆದೆ ಭಾವಪರವಶವಾಗಿತ್ತು. ನೀನು ನನ್ನನ್ನು ಬೀಳ್ಕೊಡುವಾಗ ನಿನ್ನಲ್ಲಿ ಧನ್ಯತೆ ತುಂಬಿತ್ತು. ನಿನಗೆ ಮಾತೇ ಬರುತ್ತಿರಲಿಲ್ಲ. ಆದರೆ ನಿನ್ನ ತುಟಿಗಳಿಂದ ಏನನ್ನು ಹೇಳಲಾಗುತ್ತಿರಲಿಲ್ಲವೋ ಅದೆಲ್ಲವನ್ನೂ ನಿನ್ನ ಕಂಗಳು ಹೇಳುತ್ತಿದ್ದವು. ನಿನ್ನ ಮೌನ ಹೆಚ್ಚು ಮಾತನಾಡುತ್ತಿತ್ತು. ನಿನ್ನ ತುಟಿ ಮತ್ತು ಗಂಟಲು ಯುದ್ಧಕ್ಕಿಳಿದಿದ್ದವು. ನಿನ್ನ ತುಟಿಗಳಿಂದ ಹೊರಹೊಮ್ಮುವ ನುಡಿಗಳಿಗಿಂತಲೂ ನಿನ್ನ ಕಣ್ಣಿನಿಂದ ಜಾರುತ್ತಿದ್ದ ಹನಿಗಳು ನಿನ್ನ ಬೆನ್ನಿಗೆ ನಿಂತಿದ್ದವು.

ಇಲ್ಲಿ ಲಂಡನ್ನಿನಲ್ಲಿ ಈ ಮುಂಜಾನೆಯಲ್ಲಿ ಎಲ್ಲವೂ ನನ್ನೆದೆಯನ್ನು ಇರಿಯುತ್ತಿವೆ. ನನ್ನ ಹೃದಯ ಭಾರವಾಗುತ್ತಿದೆ. ನನ್ನೆದೆ ತಲ್ಲಣಿಸುತ್ತಿದೆ. ಹೇಗಿದ್ದೀಯ ರಮಾ? ಯಶವಂತ ಚನ್ನಾಗಿದ್ದಾನಾ? ಅವನಿಗೆ ನನ್ನ ನೆನಪಾಗುತ್ತಿದೆಯೇ? ಅವನ ಸಂಧಿವಾತದ ಸಮಸ್ಯೆ ಹೇಗಿದೆ? ಅವನನ್ನು ಚನ್ನಾಗಿ ನೋಡಿಕೋ ರಮಾ. ನಮ್ಮ ನಾಲ್ಕು ಮಕ್ಕಳು ನಮ್ಮನ್ನಗಲಿದರು. ಈಗ ನಮಗೆ ಯಶವಂತನೊಬ್ಬನೇ ಉಳಿದಿದ್ದಾನೆ. ನಿನ್ನ ತಾಯ್ತನದ ಏಕೈಕ ಕುಡಿ ಅವನೊಬ್ಬನೇ. ನಾವು ಅವನನ್ನು ಉಳಿಸಿಕೊಳ್ಳಬೇಕಿದೆ ರಮಾ. ಯಶವಂತ ಜೋಪಾನ. ಅವನನ್ನು ಚನ್ನಾಗಿ ಓದಿಸು. ರಾತ್ರಿಯಿಡೀ ಎಚ್ಚರವಾಗಿ ಓದಲು ಹಚ್ಚು ರಮಾ. ನನ್ನ ತಂದೆ ರಾತ್ರಿ ಹೊತ್ತಲ್ಲಿ ಓದಲು ಎಬ್ಬಿಸುತ್ತಿದ್ದರು. ಅಲ್ಲಿಯವರೆಗೂ ಅವರು ಎಚ್ಚರವಾಗಿರುತ್ತಿದ್ದರು. ನನಗೆ ಶಿಸ್ತು ಕಲಿಸಿದ್ದೇ ನನ್ನಪ್ಪ. ನಾನು ಮೇಲೆದ್ದು ಓದಲು ಕುಳಿತಾಗಲೇ ಅವರು ಮಲಗುತ್ತಿದ್ದದ್ದು. ಆರಂಭದಲ್ಲಿ ರಾತ್ರಿ ಸಮಯ ಎದ್ದು ಓದಲು ಹಿಂದು ಮುಂದು ಯೋಚಿಸುತ್ತ ನಾನು ಸೋಮಾರಿಯಾಗಿದ್ದೆ. ಆ ಸಮಯದಲ್ಲಿ ಓದುವುದಕ್ಕಿಂತ ಮಲಗುವುದೇ ಹೆಚ್ಚು ಸುಖಕರವಾಗಿತ್ತು. ದಿನ ಕಳೆದಂತೆಲ್ಲ ಜೀವನದಲ್ಲಿ ಮಲಗುವುದಕ್ಕಿಂತ ಓದುವುದೇ ಹೆಚ್ಚಾಯಿತು.

ಇದರ ಶ್ರೇಯಸ್ಸು ನನ್ನಪ್ಪನಿಗೇ ಹೋಗಬೇಕು. ಹಾಗಾಗಿ ನನ್ನ ಜ್ಞಾನದ ಜ್ವಾಲೆ ಇಂದಿಗೂ ಉರಿಯುತ್ತಲೇ ಇದೆ. ನನ್ನಪ್ಪ ದೀಪದ ಎಣ್ಣೆಯಂತೆ ಸುಟ್ಟಿಕೊಳ್ಳುತ್ತಲೇ ಹೋದರು. ಅವರಿಂದ ಎಷ್ಟು ಸಾಧ್ಯವೋ ಅಷ್ಟು ಮಾಡಿದರು. ಕತ್ತಲನ್ನು ಬೆಳಕಾಗಿಸಿದರು. ನನ್ನಪ್ಪನ ಶ್ರಮ ಇಂದು ಫಲ ನೀಡುತ್ತಿದೆ. ನನಗಿಂದು ಹೆಚ್ಚು ಒಳ್ಳೆಯದಾಗುತ್ತಿದೆ ರಮಾ. ರಮಾ, ಯಶವಂತನೂ ಸಹ ಹಾಗೆಯೇ ಓದಿನಲ್ಲಿ ತಲ್ಲೀನನಾಗಬೇಕು.

ರಮಾ, ಐಷಾರಾಮಿ ಸಂಗತಿಗಳು ಉಪಯೋಗಕ್ಕೆ ಬಾರದವು. ನೀನು ನೀನಾಗಿರಬೇಕು. ಜನರು ಐಷಾರಾಮಿ ಜೀವನದ ಹಿಂದೆ ಓಡುತ್ತಲೇ ಇರುತ್ತಾರೆ. ಅವರ ಬದುಕು ಅಲ್ಲಿಂದಲೇ ಆರಂಭವಾಗಿ ಅಲ್ಲಿಗೇ ಕೊನೆಗಾಣುತ್ತದೆ. ಅವರ ಬದುಕು ಬದಲಾಗುವುದೇ ಇಲ್ಲ. ರಮಾ, ನಾವು ಅವರಂತೆ ಬದುಕಬಾರದು, ಬದುಕಲಾರೆವು. ದುಃಖವಲ್ಲದೆ ಬೇರೇನೂ ನಮಗೆ ಉಳಿದಿಲ್ಲ. ಬಡತನ ಮತ್ತು ದಾರಿದ್ರ್ಯವನ್ನು ಹೊರತುಪಡಿಸಿ ಬೇರೆ ಗೆಳೆತನ ನಮಗಿಲ್ಲ. ಕಷ್ಟ ಮತ್ತು ಸಂಕಷ್ಟಗಳು ನಮ್ಮನ್ನು ಬಿಟ್ಟು ತೊಲಗಲಾರವು. ಅವಮಾನ, ವಂಚನೆ, ಬಹಿಷ್ಕಾರಗಳು ನೆರಳಿನಂತೆ ನಮ್ಮನ್ನು ಬೆಂಬಿಡದೆ ಹಿಂಬಾಲಿಸುತ್ತವೆ. ನಮಗಾಗಿ ಕೇವಲ ಕತ್ತಲಿದೆ. ದುಃಖದ ಸಮುದ್ರವಿದೆ. ನಮಗಾಗಿ ನಾವೇ ಸೂರ್ಯನ ಉದಯಿಸಿಕೊಳ್ಳಬೇಕು ರಮಾ. ನಮ್ಮ ದಾರಿಯನ್ನು ನಾವೇ ಮಾಡಿಕೊಳ್ಳಬೇಕು. ನಮ್ಮ ದಾರಿಯಲ್ಲಿ ನಾವೇ ದೀಪದ ಹಾರವಾಗಬೇಕು. ಆ ದಾರಿಯಲ್ಲಿ ಚಲಿಸಿ ಜಯಗಳಿಸಬೇಕು. ನಮಗೆ ಯಾವ ಜಗತ್ತೂ ಇಲ್ಲ. ನಮ್ಮ ಜಗತ್ತನ್ನು ನಾವೇ ಕಟ್ಟಿಕೊಳ್ಳಬೇಕು.

ನಾವು ಹೀಗೆ ಬದುಕಬೇಕು ರಮಾ. ಅದಕ್ಕಾಗಿಯೇ ಯಶವಂತನನ್ನೂ ಚನ್ನಾಗಿ ಓದಿಸಬೇಕೆಂದು ಹೇಳಿದೆ. ಅವನ ಉಡುಗೆಯ ಬಗ್ಗೆ ಜಾಗರೂಕಳಾಗಿರು. ಎಲ್ಲ ಸಂಗತಿಯನ್ನು ಅರ್ಥಮಾಡಿಸು. ಅವನ ಮನದಲ್ಲಿ ಶ್ರದ್ದೆ ಮೂಡುವಂತೆ ಮಾಡು.

ನಿನ್ನ ನೆನಪು ಇನ್ನಿಲ್ಲದಂತೆ ಕಾಡುತ್ತಿದೆ. ಯಶವಂತನ ನೆನಪೂ ಕಾಡುತ್ತಿದೆ. ನನಗೊಂದೂ ಅರ್ಥವಾಗುತ್ತಿಲ್ಲ. ನಿನ್ನ ಪರಿಸ್ಥಿತಿ ನನಗರ್ಥವಾಗುತ್ತಿಲ್ಲವೆಂದಲ್ಲ ರಮಾ. ನೀನು ಬೆಂಕಿಯಲ್ಲಿ ಬೇಯುತ್ತಿರುವುದು ನನಗೆ ತಿಳಿಯುತ್ತಿದೆ. ನೀನು ಉದುರುತ್ತಿರುವ ಎಲೆಯಂತೆ ಜೀವನವನ್ನು ಕಳೆಯುತ್ತಿದ್ದೀಯೆ ಎಂಬುದು ನನಗರಿವಿದೆ. ಆದರೆ ನಾನೇನು ಮಾಡಲಿ ರಮಾ? ಒಂದು ಕಡೆ ದಟ್ಟ ದಾರಿದ್ರ್ಯ, ಮತ್ತೊಂದು ಕಡೆ ನನಗೆ ನಾನೇ ಹಠದಿಂದ ಮಾಡಿಕೊಂಡಿರುವ ಪ್ರತಿಜ್ಞೆ. ಜ್ಞಾನದ ಪ್ರತಿಜ್ಞೆ.

ಜ್ಞಾನವೆಂಬ ಸಮುದ್ರವನ್ನು ಹಿಂಡುತ್ತಿದ್ದೇನೆ. ಇನ್ನಾವುದರ ಬಗ್ಗೆಯೂ ನನಗೆ ಯೋಚನೆ ಇಲ್ಲ. ನಾನು ಪಡೆದಿರುವ ಈ ಸಾಮರ್ಥ್ಯದಲ್ಲಿ ನಿನ್ನದೂ ಪಾಲಿದೆ. ನೀನು ನನ್ನ ಪಕ್ಕ ಕುಳಿತು ನನ್ನ ಪ್ರಪಂಚವನ್ನು ಎತ್ತಿ ಹಿಡಿದಿರುವೆ. ನೀನು ನಿನ್ನ ಪವಿತ್ರ ಕಣ್ಣೀರನು ಚಿಮುಕಿಸುತ್ತಾ ನನ್ನ ಮನೋಬಲವನ್ನು ಉತ್ತೇಜಿಸುತ್ತಿರುವೆ. ಆದ್ದರಿಂದಲೇ ನಾನು ಅದಾವುದಕ್ಕೂ ಭಯಪಡದೇ ಜ್ಞಾನದ ಅನಂತ ಸಾಗರವನ್ನು ಹೀರಿಕೊಳ್ಳುವವನಾಗಿದ್ದೇನೆ.

ಸತ್ಯ ಹೇಳಬೇಕೆಂದರೆ ರಮಾ, ನಾನು ಕಠೋರಿಯಲ್ಲ. ಕೆಲವರು ಅದನ್ನು ಹಿಂಸೆಯೆಂದರೂ ಸಹ ದಾರಿದ್ರ್ಯದ ರೆಕ್ಕೆಗಳನ್ನು ಚಾಚುತ್ತಾ ಆಗಸದಲ್ಲಿ ಹಾರುತ್ತಿದ್ದೇನೆ. ನನ್ನ ಮನಸ್ಸೂ ಗಾಯಗೊಂಡಿದೆ. ನನ್ನ ಕೋಪವೂ ಕೆಂಡವಾಗಿದೆ. ನನಗೂ ಹೃದಯವಿದೆ ರಮಾ. ನಾನೂ ಮರುಗುತ್ತೇನೆ. ಆದರೆ ಬದಲಾವಣೆಯೆಂಬ ಕ್ರಾಂತಿಗೆ ಗಂಟು ಬಿದ್ದಿದ್ದೇನೆ. ಹಾಗಾಗಿ ನನ್ನ ಭಾವನೆಗಳನ್ನು ಚಿತೆಗೇರಿಸಬೇಕಿದೆ. ಅದರ ಬಿಸಿ ನಿನಗೂ ಮತ್ತು ಯಶವಂತನಿಗೂ ಕೆಲವೊಮ್ಮೆ ತಟ್ಟುತ್ತದೆ. ಇದು ಸತ್ಯ. ಆದರೆ ರಮಾ, ಈ ಬಾರಿ ನಾನು ಎಡಗೈಯಲ್ಲಿ ಬರೆಯುತ್ತಾ ಬಲಗೈಯಲ್ಲಿ ನನ್ನ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದೇನೆ. ನಮ್ಮ ಸಣಕಲು ಮಗನನ್ನು ಚನ್ನಾಗಿ ನೋಡಿಕೋ ರಮಾ. ಅವನನ್ನು ಹೊಡೆಯಬೇಡ. ನಾನವನನ್ನು ಹೊಡೆದಿದ್ದೆ. ಅದನ್ನೆಂದಿಗೂ ಅವನಿಗೆ ನೆನಪಿಸಬೇಡ. ನಿನ್ನ ಹೃದಯದ ಏಕೈಕ ತುಣುಕವನು.

ಧಾರ್ಮಿಕ ಗುಲಾಮಗಿರಿ, ಆರ್ಥಿಕ ಮತ್ತು ಸಾಮಾಜಿಕ ಯಾಜಮಾನ್ಯ ಹಾಗೂ ಮನುಷ್ಯರ ಮಾನಸಿಕ ಗುಲಾಮಗಿರಿಯ ಮೂಲವನ್ನು ನಾನು ಹುಡುಕಬೇಕಿದೆ. ಇವುಗಳು ಮಾನವರ ಜೀವನವನ್ನು ಬದಲಾಯಿಸುವುದಿಲ್ಲ. ಇವುಗಳನ್ನು ಸಂಪೂರ್ಣವಾಗಿ ಸುಟ್ಟು ಮಣ್ಣು ಮಾಡಬೇಕು. ಇವುಗಳನ್ನು ಸಮಾಜದ ಸ್ಮೃತಿಯಿಂದ ಹಾಗೂ ಆಚರಣೆಗಳಿಂದ ನಿರ್ಮೂಲನೆ ಮಾಡಬೇಕಾಗಿದೆ.

ರಮಾ, ನೀನು ಈ ಪತ್ರವನ್ನು ಓದುತ್ತಿರುವಾಗ ನಿನ್ನ ಕಣ್ಣಲ್ಲಿ ನೀರು ಜಿನುಗುತ್ತಿರುತ್ತದೆ. ಗಂಟಲು ಕಟ್ಟಿಕೊಂಡಿರುತ್ತದೆ. ನಿನ್ನೆದೆ ಬಡಿದುಕೊಳ್ಳುತ್ತಿರುತ್ತದೆ. ತುಟಿಗಳು ನಡುಗುತ್ತಿರುತ್ತವೆ. ಮನದಲ್ಲಿ ಮೂಡುವ ಮಾತು ತುಟಿಗೆ ಬಾರದಂತಾಗಿರುತ್ತದೆ. ನೀನು ತಳಮಳಗೊಂಡಿರುತ್ತೀಯೆ. ರಮಾ, ನೀನು ನನ್ನ ಬಾಳಿನಲ್ಲಿ ಬರದಿದ್ದರೆ ಅದೇನಾಗುತ್ತಿತ್ತೋ? ನನ್ನ ಬಾಳ ಸಂಗಾತಿಯಾಗಿ ನಿನ್ನನ್ನು ಭೇಟಿಯಾಗದಿದ್ದರೇ, ಅದೇನಾಗುತ್ತಿತ್ತೋ ಕಾಣೆ? ಸುಖವನ್ನೇ ಬಯಸುವ ಮಹಿಳೆಯಾಗಿದ್ದರೆ ಅವಳು ನನ್ನನ್ನು ಬಿಟ್ಟು ಹೋಗುತ್ತಿದ್ದಳೇನೋ? ಅರೆ ಹೊಟ್ಟೆಯಲ್ಲಿ ಮಲಗಲು, ಹಸುವಿನ ಸಗಣಿಯನ್ನು ಹುಡುಕಲು ಅಥವಾ ಬೆರಣಿಯನ್ನು ತಟ್ಟಲು ಯಾರು ತಾನೆ ಇಷ್ಟ ಪಡುತ್ತಾರೆ. ಮುಂಬೈ ನಗರದಲ್ಲಿ ಒಲೆಗೆ ಬೆರಣಿ ತರಲು ಯಾರು ಬಯಸುತ್ತಾರೆ? ಹರಿದ ಬಟ್ಟೆಯನ್ನು ಹೊಲಿಯುತ್ತಾ, ಅಷ್ಟೇ ಅಲ್ಲಾ ಒಂದೇ ಒಂದು ಬೆಂಕಿ ಪೊಟ್ಟಣದಲ್ಲಿ ತಿಂಗಳಿಡೀ ಕಳೆಯುತ್ತಾ, ಒಂದಿಷ್ಟು ಎಣ್ಣೆ, ಕಾಳು, ಉಪ್ಪಿನೊಂದಿಗೆ ಜೀವನ ಸಾಗಿಸಲು ಯಾರು ತಾನೆ ಇಷ್ಟ ಪಡುತ್ತಾರೆ? ಅಂದರೆ, ಈ ಬಡತನದ ಬೇಗೆಯು ನಿನಗೆ ಹಿಡಿಸದಂತಾಗಿಬಿಟ್ಟಿದ್ದರೆ ಏನು ಕತೆ? ನಾನು ತುಂಡು ತುಂಡಾಗಿ ಹರಿದು ಹೋಗುತ್ತಿದ್ದೆ. ನನ್ನ ಗಟ್ಟಿತನ ಬಿರುಕು ಬಿಡುತ್ತಿತ್ತು. ನೀನಿಲ್ಲದಿದ್ದರೆ ನನ್ನ ಹೆಬ್ಬಯಕೆಯ ಉಬ್ಬರವಿಳಿತಗಳು ಸಣ್ಣ ಗಾಳಿಗೂ ಹಿಂದೆ ಸರಿದು ಕಣ್ಮರೆಯಾಗುತ್ತಿದ್ದವು. ನನ್ನ ಕನಸುಗಳ ಕ್ರೀಡಾಕೂಟ ಸಂಪೂರ್ಣವಾಗಿ ನಾಶವಾಗುತ್ತಿತ್ತು. ರಮಾ, ನನ್ನ ಜೀವನದ ರಾಗ ಲಯ ಕಳೆದುಕೊಳ್ಳುತ್ತಿತ್ತು. ಎಲ್ಲವೂ ಅದಲು ಬದಲಾಗುತ್ತಿತ್ತು. ಸರ್ವಸ್ವವೂ ದುಃಖಮಯವಾಗುತ್ತಿತ್ತು. ಬಹುಶಃ ನಾನು ಊನಗೊಂಡ ಸಸ್ಯವಾಗುತ್ತಿದ್ದೆ.

ನೀನು ನನ್ನನ್ನು ನೋಡಿಕೊಳ್ಳುವಂತೆ ನಿನ್ನನ್ನೂ ನೋಡಿಕೋ. ನಾನು ಶೀಘ್ರದಲ್ಲಿಯೇ ಹಿಂತಿರುಗಿ ಬರುತ್ತೇನೆ. ಚಿಂತಿಸಬೇಡ. ಎಲ್ಲರನ್ನೂ ಕೇಳಿದೆ ಎಂದು ತಿಳಿಸು.

ನಿನ್ನವ  
ಭೀಮರಾವ್  
ಲಂಡನ್  
ಡಿಸೆಂಬರ್ 30, 1930.

ಮರಾಠಿಯಿಂದ ಇಂಗ್ಲೀಷಿಗೆ : ಪ್ರದೀಪ್ ಅತ್ರಿ,  
ಕನ್ನಡಕ್ಕೆ: ವಿಕಾಸ್ ಆರ್ ಮೌರ್ಯ  
(ಜಾಲತಾಣದಿಂದ ಸಂಗ್ರಹ) ಸಂಪಿಗೆ ವಾಸು

---

# ಇಂಗ್ಲೆಂಡಿನ ಹಸಿರು ಮಕ್ಕಳ ಶಂಖ ಪಾಷಾಣದ ಕಥೆ

**“ಇಂಗ್ಲಂಡಿನಲ್ಲಿ ಕೈಗಾರಿಕಾ ಕ್ರಾಂತಿಯ ಕಾರಣ, ಕಲ್ಲಿದ್ದಿಲಿನ ಉಪಯೋಗವು ಮಿತಿಮೀರಿತ್ತು. ಎಲ್ಲೆಲ್ಲೂ ಕಪ್ಪು ಮಸಿಯದೇ ಕಾರು ಬಾರು. ಮನೆಯ ಒಳ-ಹೊರ ಗೋಡೆಗಳಲ್ಲಿ ಕಪ್ಪು ಛಾಯೆಯಿಂದ ಕೂಡಿದ್ದ ಕಾರಣ, ಜನರ ಮನಸ್ಸೂ ಸಹ ಒಂದು ರೀತಿ ಮಂಕುಬಡಿದಂತಿತ್ತು.**

ಹಿಂದಿರುಗಿ ನೋಡಿದಾಗ ಒಂದು ಹಸಿರು ಬಣ್ಣವು ಇಂಗ್ಲಂಡಿನ ವಿಕ್ಟೋರಿಯನ್ ಪ್ರಜೆಗಳನ್ನು ತುಂಬಾ ಆಕರ್ಷಿಸಿತು. ಈ ಹಸಿರು ಬಣ್ಣವು ತಾಜಾ ಎಳೆ ಹಸಿರು ಹುಲ್ಲಿನಂತೆ, ಪ್ರಜ್ವಲ ವರ್ಣದೊಡನೆ, ನೋಡಿದವರಿಗೆ ಆಹ್ಲಾದವೆನಿಸುವಂತೆ ಅತ್ಯಾಕರ್ಷಕವಾಗಿತ್ತು. ತಮ್ಮ ಮನೆಯ ಗೋಡೆಗಳಿಗೆ ಈ ಹಸಿರು ಬಣ್ಣವನ್ನು ಲೇಪಿಸಿದರು. ಆದರೆ...

ಬ್ರಿಟನ್‌ನ ರಾಣಿ ವಿಕ್ಟೋರಿಯ (1819– 1901) 1837ರಿಂದ 1901ವರೆಗೆ ರಾಜ್ಯವನ್ನು ಆಳಿದಳು. ಈ ಅವಧಿಯು ವಿಕ್ಟೋರಿಯನ್ ಇಂಗ್ಲಂಡ್ ಎಂದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಕೈಗಾರಿಕಾ ಕ್ರಾಂತಿಯ ಫಲವಾಗಿ ಇಂಗ್ಲಂಡಿನಲ್ಲಿ ಅಸಾಧಾರಣ ಸುಧಾರಣೆಯಾಗಿತ್ತು.

ಟೆಲಿಗ್ರಾಫ್, ಟೆಲಿಫೋನ್, ಗ್ಯಾಸ್ ಲೈಟ್, ರೈಲ್ವೇ, ಉಗಿ ಜಹಜು ಇತ್ಯಾದಿ ಸೌಲಭ್ಯಗಳು ಮುಕ್ತವಾಗಿ ದೊರೆಯುತ್ತಿದ್ದವು. ಚಾರ್ಲ್ಸ್ ಡಾರ್ವಿನ್ ತನ್ನ ವಿಕಾಸವಾದವನ್ನು ಮಂಡಿಸಿದ್ದ. ಚಾರ್ಲ್ಸ್ ಡಿಕನ್ಸ್ ತನ್ನ ಪ್ರಖ್ಯಾತ ಕಾದಂಬರಿಗಳನ್ನು ಪ್ರಕಟಿಸಿದ್ದ.

ಒಟ್ಟಿನಲ್ಲಿ ಇಂಗ್ಲಂಡ್ ಹೊಸ ಲವಲವಿಕೆಯಿಂದ ನಳನಳಿಸುತ್ತಿದ್ದ ಕಾಲ. ಇಂಗ್ಲಂಡಿನಲ್ಲಿ ಕೈಗಾರಿಕಾ ಕ್ರಾಂತಿಯ ಕಾರಣ, ಕಲ್ಲಿದ್ದಿಲಿನ ಉಪಯೋಗವು ಮಿತಿಮೀರಿತ್ತು. ಎಲ್ಲೆಲ್ಲೂ ಕಪ್ಪು ಮಸಿಯದೇ ಕಾರು ಬಾರು. ಮನೆಯ ಒಳ-ಹೊರ ಗೋಡೆಗಳಲ್ಲಿ ಕಪ್ಪು ಛಾಯೆಯಿಂದ ಕೂಡಿದ್ದ ಕಾರಣ, ಜನರ ಮನಸ್ಸೂ ಸಹ ಒಂದು ರೀತಿ ಮಂಕುಬಡಿದಂತಿತ್ತು.

ಇಂತಹ ಸಂದರ್ಭದಲ್ಲಿ ಒಂದು ಹಸಿರು ಬಣ್ಣವು ವಿಕ್ಟೋರಿಯನ್ ಪ್ರಜೆಗಳನ್ನು ತುಂಬಾ ಆಕರ್ಷಿಸಿತು. ಈ ಹಸಿರು ಬಣ್ಣವು ತಾಜಾ ಎಳೆ ಹಸಿರು ಹುಲ್ಲಿನಂತೆ, ಪ್ರಜ್ವಲ ವರ್ಣದೊಡನೆ, ನೋಡಿದವರಿಗೆ ಆಹ್ಲಾದವೆನಿಸುವಂತೆ ಅತ್ಯಾಕರ್ಷಕವಾಗಿತ್ತು. ತಮ್ಮ ಮನೆಯ ಗೋಡೆಗಳಿಗೆ ಈ ಹಸಿರು ಬಣ್ಣವನ್ನು ಲೇಪಿಸಿದರೆ, ತುಂಬಾ ಚೆನ್ನಾಗಿ ಕಾಣುತ್ತದೆ ಎಂದು ಭಾವಿಸಿದರು.

ತಮ್ಮ ಮನೆಯ ಗೋಡೆಗಳಿಗೆ ಈ ಹಸಿರು ಬಣ್ಣವನ್ನು ಲೇಪಿಸುವುದರ ಜೊತೆಯಲ್ಲಿ ತಮ್ಮ ರೇಷ್ಮೆ ಉಡುಪುಗಳಿಗೂ ಸಹ ಈ ಹಸಿರು ಪುಡಿಯನ್ನು ಲೇಪಿಸಿ, ಹೊಸ ಫ್ಯಾಶನ್ ಯುಗವನ್ನು ಆರಂಬಿಸಿದರು. ಆದರೆ ಆ ಮರಕತದ ಹೊಳಪನ್ನು ಮೀರಿಸುವ ಈ ಹಸಿರು ಬಣ್ಣದ ಹಿಂದೆ ಕರಾಳ ಮೃತ್ಯುವು ಅಡಗಿತ್ತೆಂದು ಯಾರಿಗೂ ತಿಳಿದಿರಲಿಲ್ಲ.

**ಹಸಿರು ಮಕ್ಕಳು:** ವಿಕ್ಟೋರಿಯನ್ ಯುಗದ ಜನರು ಮಾರಕ ಹಸಿರುಬಣ್ಣದ ಮೋಹಕ್ಕೆ ತುತ್ತಾಗಿ ಸಾವು ನೋವುಗಳನ್ನು ಅನುಭವಿಸಿದ ಕಥೆಯನ್ನು ಕೇಳುವ ಮೊದಲು ವೂಲ್ಪಿಟ್ ಹಳ್ಳಿಯ ಹಸಿರು ಮಕ್ಕಳು ಕಥೆಯನ್ನು ತಿಳಿಯುವುದು ಒಳ್ಳೆಯದು. 12ನೆಯ ಶತಮಾನದ ಇಂಗ್ಲಂಡ್. ಕಿಂಗ್ ಸ್ಟೀಫನ್ (1092–1154) ರಾಜ್ಯಭಾರವನ್ನು ಮಾಡುತ್ತಿದ್ದ ಕಾಲ.

ಇಂಗ್ಲಂಡಿನ ಸಫೋಕ್ ಪ್ರಾಂತದ ವೂಲ್ಪಿಟ್ ಹಳ್ಳಿ. ಅಲ್ಲಿ ಇಬ್ಬರು ಮಕ್ಕಳು–ಸೋದರ ಸೋದರಿಯರು–ತೋಳಗಳನ್ನು ಹಿಡಿಯುವ ಗುಂಡಿಯ ಬಳಿ ಕಂಡು ಬಂದರು. ಅವರು ನೋಡುವುದಕ್ಕೆ ಎಲ್ಲ ಮಕ್ಕಳ ಹಾಗೆ ಇದ್ದರೂ, ಚರ್ಮ ಮಾತ್ರ ಉಜ್ವಲ ಹಸಿರು ಬಣ್ಣಕ್ಕೆ ಇತ್ತು. ಅವರು ಅಪರಿಚಿತ ಭಾಷೆಯನ್ನು ಮಾತನಾಡುತ್ತಿದ್ದರು. ಅವರ ನಡೆನುಡಿಗಳು ವಿಭಿನ್ನವಾಗಿದ್ದವು.

ಇಂಗ್ಲೀಷಿನವರು ತಿನ್ನುತ್ತಿದ್ದ ಯಾವ ಒಂದು ಆಹಾರ ಪದಾರ್ಥವನ್ನೂ ಅವರು ಮುಟ್ಟಲಿಲ್ಲ. ಹಲವು ದಿನಗಳ ಉಪವಾಸವೇ ಇದ್ದರು. ಒಂದು ಸಲ ಚಪ್ಪರದವರೆಯನ್ನು (ಪಾವಾ ಬೀನ್ಸ್) ಕಂಡೊಡನೆ, ಅದನ್ನು ಹಸಿಹಸಿಯಾಗಿ ಮುಕ್ಕಿದರು. ಹುಡುಗನು ದಿನೇ ದಿನೇ ನಿಶ್ಶಕ್ತನಾಗಿ ಒಂದು ದಿವಸ ಮರಣಿಸಿದ. ಆದರೆ ಹುಡುಗಿಯೂ ಹೇಗೋ ಬದುಕುಳಿದಳು. ಕ್ರಮೇಣ ಅವಳು ಎಲ್ಲ ಆಹಾರ ಪದಾರ್ಥಗಳನ್ನು ತಿನ್ನಲು ಕಲಿತಳು.

ಕಾಲಕ್ರಮೇಣ ಅವಳ ಚರ್ಮದ ಹಸಿರು ಬಣ್ಣವು ಮಾಯವಾಗಿ ಎಲ್ಲರಂತೆ ಸಹಜ ಬಣ್ಣವನ್ನು ತಳೆಯಿತು. ಇಂಗ್ಲಿಷ್ ಭಾಷೆಯನ್ನೂ ಕಲಿತಳು. ಆಗ ಅವಳು ತಾನು ಸೈಂಟ್ ಮಾರ್ಟಿನ್ ಲ್ಯಾಂಡ್‌ಗೆ ಸೇರಿದವಳು ಎಂದಳು. ತಾನು ಹೇಗೆ ವೂಲ್ಪಿಟ್ ಹಳ್ಳಿಗೆ ಬಂದೆ ಎನ್ನುವುದನ್ನು ಅವಳು ಹೇಳದಾದಳು.

ಒಟ್ಟಿನಲ್ಲಿ ಆಕೆಯು ಓರ್ವ ನಿಗೂಢ ಹಸಿರು ಹುಡುಗಿಯಾಗಿ ಇಂಗ್ಲಂಡಿಗರ ಜಾನಪದ ಕಥೆಗಳನ್ನು ಬೆರೆತು ಹೋದಳು. ಈಗ ಆಧುನಿಕ ವೈದ್ಯಕೀಯ ವಿಜ್ಞಾನದ ಹಿನ್ನೆಲೆಯಲ್ಲಿ ಆಕೆಗೆ ಕ್ಲೋರೋಸಿಸ್ ಎಂಬ ಹೆಸರಿನ ರಕ್ತಹೀನತೆಯು ಇದ್ದಿರಬಹುದು ಎನ್ನುತ್ತಾರೆ. ಆದರೆ ವಿಕ್ಟೋರಿಯನ್ ಯುಗದಲ್ಲಿ ಕಂಡಬರುವ ಹಸಿರು ಮಕ್ಕಳು ಹಾಗೂ 12ನೆಯ ಶತಮಾನದಲ್ಲಿ ಕಂಡುಬಂದ ಈ ಹಸಿರು ಮಕ್ಕಳು ಸಂಪೂರ್ಣ ಭಿನ್ನರಾಗಿದ್ದಾರೆ. ಆ ಬಗ್ಗೆ ಗಮನವನ್ನು ಹರಿಸೋಣ.

**ಶೀಲೇಸ್ ಗ್ರೀನ್:** 1775. ಸ್ವೀಡಿಶ್ ರಸಾಯನ ವಿಜ್ಞಾನಿ ಕಾರ್ಲ್ ವಿಲ್‌ಹೆಲ್ಮ್ ಶೀಲೆ (1742–1786). ಇವನು ಕ್ಯುಪ್ರಿಕ್ ಹೈಡ್ರೋಜೆನ್ ಅರ್ಸೆನೇಟ್ ಎಂಬ ಬಣ್ಣದ ವಸ್ತುವೊಂದನ್ನು ಸೃಜಿಸಿದ. ಇದು ಶೀಲೇಸ್ ಗ್ರೀನ್ ಎಂದು ಹೆಸರುವಾಸಿಯಾಯಿತು. ಇದೊಂದು ಹಳದಿ–ಹಸಿರು ಮಿಶ್ರಿತ ರಾಸಾಯನಿಕ. ಇದೊಂದು ತಾಮ್ರದ ಲವಣ. ತಾಮ್ರವು ಅರ್ಸೆನಸ್ ಆಸಿಡ್ ಜೊತೆ ರಾಸಾಯನಿಕವಾಗಿ ವರ್ತಿಸಿ ಈ ಬಣ್ಣದ ವಸ್ತುವನ್ನು ಸೃಜಿಸುತ್ತಿತ್ತು. ಅದರ ಉಜ್ವಲ ಹಸಿರು ವರ್ಣವು ಹೆಚ್ಚು ಆಕರ್ಷಕವಾಗಿತ್ತು.

ಅಂದಿನ ದಿನಗಳಲ್ಲಿ ವಾಲ್‌ಪೇಪರ್‌ಗಳು ಜನಪ್ರಿಯವಾಗಿದ್ದವು. ಗೋಡೆಗೆ ನೇರವಾಗಿ ಬಣ್ಣವನ್ನು ಬಳಿಯುವ ಬದಲು, ಬಣ್ಣ ಬಣ್ಣದ ಕಾಗದಗಳನ್ನು ಹಾಗೂ ನಾನಾ ನಮೂನೆಯ ಚಿತ್ತಾರಗಳಿರುವ ಭಿತ್ತಿಚಿತ್ರಗಳನ್ನು ಗೋಡೆಗೆ ಅಂಟಿಸುತ್ತಿದ್ದರು. ಚಿತ್ರಗಳು ಹಳೆಯದಾಗುತ್ತಿದ್ದಂತೆಯೇ, ಅದನ್ನು ತೆಗೆದು ಮತ್ತೆ ಹೊಸತೊಂದನ್ನು ಅಂಟಿಸುತ್ತಿದ್ದರು.

1858ರ ವೇಳೆಗೆ ಸುಮಾರು 100 ದಶಲಕ್ಷ ಚದರ ಮೈಲಿಯಷ್ಟು ಶೀಲೇಸ್ ಗ್ರೀನ್ ಬಣ್ಣ ಬಳಿದ ವಾಲ್ ಪೇಪರುಗಳು ಇಂಗ್ಲಂಡಿಗರ ಮನೆಯ ಗೋಡೆಗಳನ್ನು ಅಲಂಕರಿಸಿದವು. ಜೊತೆಗೆ ಇಂಗ್ಲಂಡಿಗರು ಧರಿಸುವ ಉಡುಪುಗಳಿಗೂ ಹಾಗೂ ಹ್ಯಾಟುಗಳಿಗೂ ಇದೇ ಶೀಲೇಸ್ ಗ್ರೀನ್ ಬಣ್ಣವನ್ನು ಬಳಿದು ಚೆನ್ನಾಗಿ ಹಣವನ್ನು ಮಾಡಿಕೊಂಡರು.

ಇಂಗ್ಲಂಡಿನಲ್ಲಿ ಶೀಲೇಸ್ ಗ್ರೀನ್ ಬಣ್ಣದ ಫ್ಯಾಶನ್ ಮಿತಿ ಮೀರಿತು. ಈ ಹಸಿರು ಬಣ್ಣದ ವಾಲ್ ಪೇಪರ್ ಹಾಕುವುದು ಪ್ರತಿಷ್ಠೆಯ ಸಂಕೇತವಾಯಿತು. ಇಂಗ್ಲಂಡಿಗರ ಶೀಲೇಸ್ ಗ್ರೀನ್ ಹುಚ್ಚು ಹೆಚ್ಚಾಗುತ್ತಿದ್ದಂತೆಯೇ, ಒಂದು ಹೊಸ ಅಪರಿಚಿತ ರೋಗವೊಂದು ಮೆಲ್ಲನೆ ತನ್ನ ಸಹಸ್ರ ಬಾಹುಗಳನ್ನು ಎಲ್ಲೆಡೆ, ವಿಶೇಷವಾಗಿ ಫ್ಯಾಶನ್ ಪ್ರಿಯರ ಶ್ರೀಮಂತ ಮನೆಗಳಲ್ಲಿ ಹರಡಲಾರಂಭಿಸಿತು. ಈ ಹೊಸ ಕಾಯಿಲೆಯ ಸ್ವರೂಪವು ವೈದ್ಯರಿಗೆ ತಿಳಿಯಲಿಲ್ಲ.

ಕೆಲವರು ಇದನ್ನು ಡಿಫ್ತೀರಿಯ (ಗಂಟಲುಮಾರಿ) ಎಂದರು. ಹಲವರು ಇದು ಕಾಲರಾ ಕಾಯಿಲೆಯ ಮತ್ತೊಂದು ರೂಪವೆಂದರು. ಉಳಿದವರು ಇದು ಅಲ್ಪಪ್ರಮಾಣದ ಜ್ವರವನ್ನು ಹರಡುವ ಅಪರಿಚಿತ ಕಾಯಿಲೆ ಎನ್ನುವ ತೀರ್ಮಾನಕ್ಕೆ ಬಂದರು.

**ವೈದ್ಯನ ವ್ಯಾಧಿ:** 1857. ಬರ್ಮಿಂಗ್‌ಹ್ಯಾಮಿನಲ್ಲಿ ಡಾವಿಲಿಯಂ ಹೈಂಡ್ಸ್ ಎಂಬ ವೈದ್ಯ. ತನ್ನ ಓದುವ ಕೋಣೆಗೆ ಹೊಸದಾಗಿ ವಾಲ್‌ಪೇಪರ್ ಹಾಕಿಸಿದ್ದ. ಪ್ರತಿದಿನ ಸಂಜೆ ಅಧ್ಯಯನಕ್ಕೆಂದು ಓದುವ ಕೊಠಡಿಯಲ್ಲಿ ಕೂರುತ್ತಿದ್ದಂತೆಯೇ ಅವನಿಗೆ ಹೊಟ್ಟೆನೋವು ಹಾಗೂ ವಾಕರಿಕೆ ಕಾಡುತ್ತಿದ್ದವು. ತಲೆಯು ಹಗುರವಾಗಿ ಎಲ್ಲಿಯೋ ತೇಲಿ ಹೋಗುತ್ತಿರುವ ಅನುಭವವಾಗುತ್ತಿತ್ತು. ಏಕಾಗ್ರತೆಯು ಮಾಯವಾಗುತ್ತಿತ್ತು. ಆದರೆ ವಿಚಿತ್ರವೆಂದರೆ, ಓದುವ ಕೋಣೆಯನ್ನು ಬಿಟ್ಟು ಮಲಗಲೆಂದು ತನ್ನ ಶಯನಕಕ್ಷೆಗೆ ಹೋದ ಸ್ವಲ್ಪ ಹೊತ್ತಿನಲ್ಲಿಯೇ ಈ ಎಲ್ಲ ಲಕ್ಷಣಗಳು ಮರೆಯಾಗುತ್ತಿದ್ದವು.

ಹೀಗೆ ಸುಮಾರು ಒಂದು ತಿಂಗಳು ಕಳೆಯಿತು. ಕೊನೆಗೆ ಒಂದು ದಿನ ಹೊಳೆಯಿತು. ತಾನು ಓದುವ ಕೊಠಡಿಯಲ್ಲಿದ್ದಾಗ ಮಾತ್ರ ವಿಚಿತ್ರ ಲಕ್ಷಣಗಳು ಕಾಣಿಸಿಕೊಳ್ಳುತ್ತಿದ್ದವು. ತಾನು ಓದುವ ಕೊಠಡಿಯನ್ನು ಬಿಟ್ಟು ಬೇರೆಡೆ ಹೋಗುತ್ತಿರುವಂತೆಯೇ ಲಕ್ಷಣಗಳು ಮಾಯವಾಗುತ್ತಿದ್ದವು.

ಅಂದರೆ ತನ್ನ ವಿಚಿತ್ರ ಲಕ್ಷಣಗಳಿಗೆ ಕಾರಣ ಓದುವ ಕೊಠಡಿಯಲ್ಲಿಯೇ ಇರಬೇಕೆಂದು ತೀರ್ಮಾನಿಸಿದ. ಓದುವ ಕೊಠಡಿಯಲ್ಲಿ ಹೊಸದಾಗಿ ವಾಲ್‌ಪೇಪರ್ ಹಾಕಿಸಿದ್ದ. ಅದನ್ನು ಬಿಟ್ಟರೆ ಯಾವ ಬದಲಾವಣೆಗಳನ್ನೂ ಮಾಡಿರಲಿಲ್ಲ. ಹಾಗಾಗಿ ವಾಲ್‌ಪೇಪರನ್ನು ಹೆರೆದು, ಆ ಬಣ್ಣದ ಪುಡಿಯನ್ನು ಸಂಗ್ರಹಿಸಿದ. ಅದನ್ನು ನೇರವಾಗಿ ಪ್ರಯೋಗಾಲಯಕ್ಕೆ ಕೊಂಡೊಯ್ದ. ಆ ಪುಡಿಯ ರಾಸಾಯನಿಕ ವಿಶ್ಲೇಷಣೆಯನ್ನು ನಡೆಸುವಂತೆ ಹೇಳಿದ.

ಪ್ರಯೋಗಾಲಯದ ವರದಿಯು ಆ ಪುಡಿಯ ತುಂಬ ಪ್ರಬಲ ಶಂಖಪಾಷಾಣ ಅಥವ ಅರ್ಸೆನಿಕ್ ಇರುವುದಾಗಿ ತೀರ್ಮಾನವನ್ನು ನೀಡಿತು. ಅವನು ಕೂಡಲೇ ಒಂದು ಪ್ರಬಂಧವನ್ನು ಬರೆದು ಗ್ರೇಟ್ ಬ್ರಿಟನ್‌ನಲ್ಲಿ ನಿಧಾನ ವಿಷಪ್ರಾಶನವು ನಡೆಯುತ್ತಿದೆ ಎಂಬ ಹೆಸರಿನಲ್ಲಿ ಪ್ರಕಟಿಸಿದ.

**ಕುರುಡು ಕಾನೂನು:** 1862. ಡಾಥಾಮಸ್ ಆರ್ಟನ್ ಎಂಬ ವೈದ್ಯನಿಗೆ ಲಂಡನ್ನಿನ ಲೈಮ್ ಹೌಸ್ ಬಡಾವಣೆಯಲ್ಲಿ ವಾಸಿಸುತ್ತಿದ್ದ ಟರ್ನರ್ ಮನೆಯಿಂದ ಕರೆ ಬಂದಿತು. ಅವರನ್ನು ಭೇಟಿಯಾದ. ಅವರ ಮನೆಯನ್ನು ಪರಿಶೀಲಿಸಿದ. ಅವರ ಮಕ್ಕಳೆಲ್ಲರೂ ಹಸಿರು ಕೋಣೆಯಲ್ಲಿ ಮಲಗುತ್ತಿದ್ದರು. ಕೋಣೆಯ ಎಲ್ಲ ಗೋಡೆಗಳ ಮೇಲೆ ದಟ್ಟ ಹಸಿರುಬಣ್ಣದ ವಾಲ್ ಪೇಪರುಗಳಿದ್ದವು. ಟರ್ನರ್ ದಂಪತಿಗಳು ವಿಹ್ವಲರಾಗಿದ್ದರು. ಅವರ ಮೂವರು ಮಕ್ಕಳು ಡಿಫ್ತೀರಿಯ ಕಾರಣ ಈಗಾಗಲೇ ಸತ್ತಿದ್ದರು. ಈಗ ನಾಲ್ಕನೆಯ ಮಗುವು, ಅನ್ನ ಅಮೇಲಿಯ ಗಂಟಲುನೋವಿನಿಂದ ನರಳುತ್ತಿದ್ದಾಳೆ. ಮೈಕೈ ಸ್ನಾಯುಗಳು ಸೊರಗಿವೆ.

ವಿಪರೀತ ದಣಿವು ಎನ್ನುತ್ತಿದ್ದಾಳೆ. ದಯವಿಟ್ಟು ಇವಳನ್ನು ಉಳಿಸಿಕೊಡಿ ಎಂದು ಗೋಗರೆದರು. ಆದರೆ ಆರ್ಟನ್ ಅವಳನ್ನು ಉಳಿಸಿಕೊಳ್ಳಲಾಗಲಿಲ್ಲ. ಆದರೆ ಟರ್ನರ್ ಮಕ್ಕಳು ಹಸಿರು ವಾಲ್‌ಪೇಪರಿನಲ್ಲಿರುವ ಅರ್ಸೆನಿಕ್ ವಿಷಪ್ರಾಶನದಿಂದ ಸತ್ತಿದ್ದಾರೆ; ಈ ಹಸಿರು ವಾಲ್ ಪೇಪರ್ ಬಳಕೆಯನ್ನು ನಿಲ್ಲಿಸಬೇಕು ಎಂದು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ. ಆದರೆ ನ್ಯಾಯಾಲಯವು ಆರ್ಟನ್ ವಾದವನ್ನು ಒಪ್ಪಲಿಲ್ಲ.

ಮಕ್ಕಳು ಡಿಫ್ತೀರಿಯದಿಂದ ಸಹಜ ಸಾವನ್ನಪ್ಪಿದ್ದಾರೆ ಎಂದಿತು. ಆರ್ಟನ್ ನಾಲ್ಕು ಮಕ್ಕಳ ಶವವನ್ನು ಪೋಸ್ಟ್ ಮಾರ್ಟಮ್ ಮಾಡಿಸಿದ. ಅವರ ದೇಹದಲ್ಲಿ ಶಂಖಪಾಷಾಣವು ಇರುವುದನ್ನು ನಿರೂಪಿಸಿದ. ಹೆನ್ರಿ ಲೆಥೆಬಿ ಎಂಬ ಸಾರ್ವಜನಿಕ ಆರೋಗ್ಯಾಧಿಕಾರಿಯು ಟರ್ನರ್ ಮನೆಯಲ್ಲಿ ಮಕ್ಕಳು ಮಲಗುವ ಕೋಣೆಯಲ್ಲಿದ್ದ ಹಸಿರು ವಾಲ್‌ಪೇಪರಿನಲ್ಲಿದ್ದ ಹಸಿರು ಬಣ್ಣವನ್ನು ಹೆರೆದು ಪ್ರಯೋಗಾಲಯಕ್ಕೆ ಕಳುಹಿಸಿದ. ಪ್ರತಿ ಚದರ ಅಡಿ ವಾಲ್ ಪೇಪರಿನಲ್ಲಿ ಮೂರು ಗ್ರೈನ್ ಅರ್ಸೆನಿಕ್ ಇರುವುದಾಗಿ ಪ್ರಯೋಗಾಲದ ವರದಿ ಸಾರಿತು.

ಒಂದು ಗ್ರೈನ್ ಎಂದರೆ ಸುಮಾರು 65 ಮಿಲಿಗ್ರಾಮ್. 3 ಗ್ರೈನ್ ಎಂದರೆ 194 ಮಿಲಿಗ್ರಾಮ್. ಈ ಪ್ರಮಾಣದ ಶಂಖಪಾಷಾಣವು ಮಕ್ಕಳ ದೇಹ ಪ್ರಮಾಣಕ್ಕೆ ಅಪಾಯಕಾರಿಯಾದದ್ದು ಎನ್ನುವುದನ್ನು ನ್ಯಾಯಾಲಯ ಒಪ್ಪಬೇಕಾಯಿತು. ಕ್ರಮೇಣ ಶೀಲೇಸ್ ಗ್ರೀನ್ ಬಣ್ಣವನ್ನು ಬಳಸಿದ್ದ ವಾಲ್‌ಪೇಪರುಗಳ ಉತ್ಪಾದನೆಯು ನಿಂತಿತು.

**ಮರಣ ಪ್ರಕ್ರಿಯೆ:** ಶೀಲೇಸ್ ಗ್ರೀನ್ ಬಣ್ಣವು ವಾಲ್ ಪೇಪರಿನ ಮೇಲಿದೆ. ಬಣ್ಣದಲ್ಲಿರುವ ಶಂಖಪಾಷಾಣವು ಮಕ್ಕಳನ್ನು ಹೇಗೆ ಕೊಲ್ಲಲು ಸಾಧ್ಯ ಎನ್ನುವ ಪ್ರಶ್ನೆಯು ಉದ್ಭವವಾಯಿತು. ಇದಕ್ಕೆ ಈ ಕೆಳಕಂಡಂತೆ ವಿವರಣೆಯನ್ನು ನೀಡಿದರು.

**ಬಣ್ಣದ ಧೂಳು:** ಪೇಪರಿನ ಮೇಲಿರುವ ಶೀಲೇಸ್ ಗ್ರೀನ್, ಹಳೆಯದಾಗುತ್ತಿರುವಂತೆಯೇ ಪೇಪರನ್ನು ಬಿಟ್ಟು ಮೇಲೆದ್ದು ಸಣ್ಣ ಸಣ್ಣ ಧೂಳಿನ ಕಣವಾಗಿ ಗಾಳಿಯಲ್ಲಿ ಬೆರೆಯುತ್ತದೆ. ಮನೆಯನ್ನು ಸ್ವಚ್ಛಗೊಳಿಸುವಾಗ, ನೆಲದ ಮೇಲಿರುವ ಧೂಳು ಮೇಲಕ್ಕೇಳುತ್ತದೆ. ಆ ಧೂಳು ಮಕ್ಕಳು ಉಸಿರಾಟದ ಮೂಲಕ ಮಕ್ಕಳ ಶ್ವಾಸಕೋಶವನ್ನು ಪ್ರವೇಶಿಸುತ್ತವೆ.



### ಹಸಿರು ಮಕ್ಕಳು...

- ಇಬ್ಬರು ಮಕ್ಕಳು–ಸೋದರ ಸೋದರಿಯರು–ತೋಳಗಳನ್ನು ಹಿಡಿಯುವ ಗುಂಡಿಯ ಬಳಿ ಕಂಡು ಬಂದರು.
- ಅವರು ನೋಡುವುದಕ್ಕೆ ಎಲ್ಲ ಮಕ್ಕಳ ಹಾಗೆ ಇದ್ದರೂ, ಚರ್ಮ ಮಾತ್ರ ಉಜ್ವಲ ಹಸಿರು ಬಣ್ಣಕ್ಕೆ ಇತ್ತು.
- ಅವರು ಅಪರಿಚಿತ ಭಾಷೆಯನ್ನು ಮಾತನಾಡುತ್ತಿದ್ದರು. ಅವರ ನಡೆನುಡಿಗಳು ವಿಭಿನ್ನವಾಗಿದ್ದವು.
- ಇಂಗ್ಲೀಷಿನವರು ತಿನ್ನುತ್ತಿದ್ದ ಯಾವ ಒಂದು ಆಹಾರ ಪದಾರ್ಥವನ್ನೂ ಅವರು ಮುಟ್ಟಲಿಲ್ಲ.
- ಹಲವು ದಿನಗಳ ಉಪವಾಸವೇ ಇದ್ದರು.
- ಒಂದು ಸಲ ಚಪ್ಪರದವರೆಯನ್ನು (ಪಾವಾ ಬೀನ್ಸ್) ಕಂಡೊಡನೆ, ಅದನ್ನು ಹಸಿಹಸಿಯಾಗಿ ಮುಕ್ಕಿದರು.
- ಹುಡುಗನು ದಿನೇ ದಿನೇ ನಿಶ್ಶಕ್ತನಾಗಿ ಒಂದು ದಿವಸ ಮರಣಿಸಿದ.
- ಆದರೆ ಹುಡುಗಿಯೂ ಹೇಗೋ ಬದುಕುಳಿದಳು.
- ಕ್ರಮೇಣ ಅವಳು ಎಲ್ಲ ಆಹಾರ ಪದಾರ್ಥಗಳನ್ನು ತಿನ್ನಲು ಕಲಿತಳು.
- ಕಾಲಕ್ರಮೇಣ ಅವಳ ಚರ್ಮದ ಹಸಿರು ಬಣ್ಣವು ಮಾಯವಾಗಿ ಎಲ್ಲರಂತೆ ಸಹಜ ಬಣ್ಣವನ್ನು ತಳೆಯಿತು.
- ಇಂಗ್ಲಿಷ್ ಭಾಷೆಯನ್ನೂ ಕಲಿತಳು. ಆಗ ಅವಳು ತಾನು ಸೈಂಟ್ ಮಾರ್ಟಿನ್ ಲ್ಯಾಂಡ್‌ಗೆ ಸೇರಿದವಳು ಎಂದಳು.
- ತಾನು ಹೇಗೆ ವೂಲ್ಪಿಟ್ ಹಳ್ಳಿಗೆ ಬಂದೆ ಎನ್ನುವುದನ್ನು ಅವಳು ಹೇಳದಾದಳು.
- ಒಟ್ಟಿನಲ್ಲಿ ಆಕೆಯು ಓರ್ವ ನಿಗೂಢ ಹಸಿರು ಹುಡುಗಿಯಾಗಿ ಇಂಗ್ಲಂಡಿಗರ ಜಾನಪದ ಕಥೆಗಳನ್ನು ಬೆರೆತು ಹೋದಳು.
- ಈಗ ಆಧುನಿಕ ವೈದ್ಯಕೀಯ ವಿಜ್ಞಾನದ ಹಿನ್ನೆಲೆಯಲ್ಲಿ ಆಕೆಗೆ ಕ್ಲೋರೋಸಿಸ್ ಎಂಬ ಹೆಸರಿನ ರಕ್ತಹೀನತೆಯು ಇದ್ದಿರಬಹುದು ಎನ್ನುತ್ತಾರೆ.

ಗಾಳಿಯಲ್ಲಿರುವ ಧೂಳು ಸಾವಕಾಶವಾಗಿ ನೆಲದ ಮೇಲೆ ಬೀಳುತ್ತದೆ. ಮನೆಯನ್ನು ಗುಡಿಸುವಾಗ, ಈ ಧೂಳು ಮತ್ತೆ ಮೇಲಕ್ಕೆದ್ದು ಮಕ್ಕಳ ಉಸಿರಾಟದ ಮೂಲಕ ದೇಹವನ್ನು ಸೇರಬಹುದು. ಮಕ್ಕಳು ಗೋಡೆಯ ಮೇಲಿರುವ ಪೇಪರನ್ನು ಮುಟ್ಟಬಹುದು. ಅದೇ ಕೈಬೆರಳನ್ನು ಬಾಯಿಯಲ್ಲಿ ಇಟ್ಟುಕೊಳ್ಳಬಹುದು.

ಧೂಳು ಬಿದ್ದ ಆಟಿಕೆಗಳನ್ನು ಮಕ್ಕಳು ಅಕಸ್ಮಾತ್ ಬಾಯಿಯಲ್ಲಿ ಇಟ್ಟುಕೊಂಡರೆ, ವಿಷವು ಹೊಟ್ಟೆಯನ್ನು ಸೇರಬಹುದು. ಇಂಗ್ಲಂಡಿನ ಹವೆ ತಂಪಾದುದು. ವಾಲ್ ಪೇಪರಿಗೆ ಅಂಟಿಸುವ ಪಿಷ್ಟಗೋಂದು ಬಿಟ್ಟುಕೊಳ್ಳಬಹುದು. ಈ ಗೋಂದನ್ನು ತಿಂದು ಬದುಕುವ ಶಿಲೀಂಧ್ರಗಳು ಸಾಕಷ್ಟಿವೆ. ಟ್ರೈಮೀಥೈಲ್‌ಅರ್ಸೈನ್ ಮುಂತಾದ ಅನಿಲಗಳನ್ನು ಉತ್ಪಾದಿಸುತ್ತವೆ. ಇವು ಬೆಳ್ಳುಳ್ಳಿಯ ಘಾಟನ್ನು ಹೋಲುತ್ತವೆ. ಈ ಅನಿಲಗಳು ವಿಷಪ್ರಭಾವವನ್ನು ಬೀರಬಲ್ಲವು.

1800ರಲ್ಲಿ ಇಟಾಲಿಯನ್ ಸೂಕ್ಷ್ಮಜೀವಿ ವಿಜ್ಞಾನಿ ಬೋರ್ಥೋಲೋಮಿಯೊ ಗೋಸಿಯೊ (1863–1944) ಎಂಬುವವನು ಪೆನಿಸಿಲ್ಲಿಯಮ್ ಬ್ರೆವಿಕಾಲ್ ಎಂಬ ಶಿಲೀಂಧ್ರವನ್ನು ಬಳಸಿ ಇದನ್ನು ಪ್ರಾಯೋಗಿಕವಾಗಿ ನಿರೂಪಿಸಿದ. ಹಾಗಾಗಿ ಶಿಲೀಂಧ್ರಗಳು ಉತ್ಪಾದಿಸುವ ಅನಿಲ ಸಮುಚ್ಚಯವನ್ನು ಗೋಸಿಯೋ ಗ್ಯಾಸ್ ಎಂದು ಕರೆದ.

**ನೆಪೋಲಿಯನ್:** ನೆಪೋಲಿಯನ್ ಬೊನಪಾರ್ಟೆ (1769–1821) ಹೇಗೆ ಸತ್ತ ಎನ್ನುವುದರ ಬಗ್ಗೆ ಇಂದಿಗೂ ಚರ್ಚೆಯು ಜಾರಿಯಲ್ಲಿದೆ. ಅವನು ಜಠರ ಕ್ಯಾನ್ಸರ್ ಕಾರಣ ಸತ್ತ ಎನ್ನುವುದು ಮರಣೋತ್ತರ ಶವಪರೀಕ್ಷೆಯಿಂದ ತಿಳಿದುಬಂದಿದೆ. ಆದರೆ ಅವನ ಕೂದಲನ್ನು ಪರೀಕ್ಷೆ ಮಾಡಿದಾಗ, ಅದರಲ್ಲಿ ಶಂಖಪಾಷಾಣದ ಅಂಶವು ಪತ್ತೆಯಾಗಿದೆ.

ಸೈಂಟ್ ಹೆಲೀನದಲ್ಲಿ ನೆಪೋಲಿಯನ್ ಇದ್ದ ಮನೆಯ ಗೋಡೆಗೆಲ್ಲ ಹಸಿರು ಬಣ್ಣದ ವಾಲ್ ಪೇಪರ್ ಹಾಕಿದ್ದರು. ಇದು ಕಾಕತಾಳೀಯವೋ ಅಥವಾ ಪ್ರಜ್ಞಾಪೂರ್ವಕ ಕೃತ್ಯವೋ ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆ.

**ಉಪಸಂಹಾರ:** 1870ರ ಹೊತ್ತಿಗೆ ಸಾರ್ವಜನಿಕರ ಒತ್ತಡವು ತೀವ್ರವಾದ ಹಿನ್ನೆಲೆಯಲ್ಲಿ ಶೀಲೇಸ್ ಗ್ರೀನ್ ಇರುವ ವಾಲ್‌ಪೇಪರುಗಳ ಉತ್ಪಾದನೆಯು ನಿಂತಿತು. ಇಂಗ್ಲಂಡಿನ ರಾಣಿ ಬಕಿಂಗ್‌ಹ್ಯಾಮ್ ಪ್ಯಾಲೇಸಿನಲ್ಲಿದ್ದ ಎಲ್ಲ ಹಸಿರು ವಾಲ್‌ಪೇಪರುಗಳನ್ನು ಬದಲಿಸಲು ಸೂಚನೆಯನ್ನು ನೀಡಿದಳು. ಅಂದು ಅರ್ಸೆನಿಕ್ ವಾಲ್‌ಪೇಪರುಗಳು ಜನಸಾಮಾನ್ಯರ ಅನಾರೋಗ್ಯಕ್ಕೆ ಕಾರಣವಾಯಿತು. ಇಂದು ಅರ್ಸೆನಿಕ್ ವಾಲ್ ಪೇಪರುಗಳ ಸ್ಥಾನವನ್ನು ಮೈಕ್ರೋ ಪ್ಲಾಸ್ಟಿಕ್ ಆಕ್ರಮಿಸಿಕೊಂಡರೆ ಆಶ್ಚರ್ಯಪಡಬೇಕಾಗಿಲ್ಲ.

**- ಡಾ.ನಾ.** ಸೋಮೇಶ್ವರ

---

## ಕನ್ನಡ ಕವನಗಳು ★★★★★★

# ಅಪ್ಪನೊಟ್ಟಿಗೆ ಅಮ್ಮ

ಒಣಗಿರುವ ಮಣ್ಣಲ್ಲಿ ಬೆವರಿಳಿಸಿ ನಿಂತವರು  
ಹನಿನೀರು ಸಿಗಲೆಂದು ನೆಲವನ್ನು ಅಗೆದವರು  
ಕೃಷಿಭೂಮಿಲೆ ಬದುಕು ಜೀವನವ ನಡೆಸಿದವರು  
ಸಂಸಾರ ನೇಗಿಲನು ಬಾಗುತಲೆ ಎಳೆದವರು  
ಅಪ್ಪನಾ ಜೊತೆಯಲ್ಲೆ ಅಮ್ಮಾ  
ನೋವಿನಲೆ ಸಾಗುತ ಪ್ರೀತಿಯನು ತೋರಿದರು  
ಬೆಲೆಯಿದ್ದ ತೋಟಗಳ ತಮ್ಮಂದಿರಿಗೆ ನೀಡಿದರು  
ಬೆಟ್ಟೆ ಜಾಗವ ಪಡೆದು ಮಕ್ಕಳನು ಸಲಹಿದರು  
ತಿನಲನ್ನ ಇರದಿರಲು ಹಪ್ಪಳವ ತಿನಿಸಿದರು  
ಅಪ್ಪನಾ ಜೊತೆಯಲ್ಲೆ ಅಮ್ಮಾ  
ಹಳತಾದ ಚಪ್ಪಲಿಯ ಧರಿಸುತ್ತ ತಿರುಗಿದರು  
ಹರಿದಿರುವ ಪಂಚೆಯಲೆ ಊರೆಲ್ಲ ಸುತ್ತಿದರು  
ಕಷ್ಟದಲಿ ಮಕ್ಕಳಿಗೆ ವಿದ್ಯೆಯನು ಕಲಿಸಿದರು  
ಬಾರದಿಹ ನೆಂಟರಾ ನೋಡದೆಯೆ ಬದುಕಿದರು  
ಅಪ್ಪನಾ ಜೊತೆಯಲ್ಲೆ ಅಮ್ಮಾ  
ತಪ್ಪದುವು ಬೇಡವೊ ಬುದ್ಧಿಯನು ಹೇಳಿದರು  
ಸ್ವಾಭಿಮಾನದ ಜೊತೆಗೆ ಸಾಗೆಂದು ತಿಳಿಸಿದರು  
ಊರವರ ಪ್ರೀತಿಯನು ಗಳಿಸುತ್ತ ಬಾಳಿದರು  
ನಮ್ಮನ್ನು ಹರಸುತಲಿ ಕಾಯವನು ತೊರೆದರು  
ಅಪ್ಪನಾ ಜೊತೆಯಲ್ಲೆ ಅಮ್ಮಾ

**- ಹಾ ಮ ಸತೀಶ** ಬೆಂಗಳೂರು



---

# ಮಕ್ಮಲ್ ನೆತ್ತಿಯ ಮರ ಗುಬ್ಬಿ

ನಿನ್ನೆ ಬೆಳಗ್ಗೆ ಶಾಲೆಗೆ ಹೋದಾಗ ನಾಲ್ಕು ಜನ ವಿದ್ಯಾರ್ಥಿಗಳು ಶಾಲೆಯ ಅಂಗಳದ ಮಾವಿನ ಮರವನ್ನು ನೋಡುತ್ತಾ ನಿಂತಿದ್ದರು. ಎರಡು ವಾರದಿಂದ ಮಾವಿನ ಮರದ ತುಂಬಾ ಹೂವು ಅರಳಿತ್ತು. ಹೂವಿನಿಂದ ಮಿಡಿ ಆಗಿದೆಯಾ ಅಂತ ಯಾವಾಗಲೂ ಲೆಕ್ಕ ಹಾಕುತ್ತಾ ನಿಂತಿರುತ್ತಾರೆ ಅಂದುಕೊಂಡು ಅಲ್ಲೇ ನೆರಳಿನಲ್ಲಿ ನನ್ನ ಬೈಕ್ ನಿಲ್ಲಿಸಿ ಅವರ ಹತ್ತಿರ ಹೋದೆ. ಎಂಟನೇ ತರಗತಿಯ ವಿದ್ಯಾರ್ಥಿ ಆದಿತ್ಯ ಕೈಯಲ್ಲಿ ಹಕ್ಕಿಯ ಕ್ಯಾಟಲಾಗ್ ಹಿಡಿದುಕೊಂಡು ನಿಂತಿದ್ದ. ಉಳಿದವರು ಅವನು ನೋಡುತ್ತಿದ್ದ ಕಡೆಗೇ ನೋಡುತ್ತಾ ಏನಿದೆ ಮರದಲ್ಲಿ ಎಂದು ಅವನನ್ನು ಕೇಳುತ್ತಿದ್ದರು. ಆದಿತ್ಯ ನನ್ನನ್ನು ನೋಡಿದವನೇ ಸರ್ ಅಲ್ಲಿ ನಾಲ್ಕು ಹಕ್ಕಿಗಳು ಇದ್ದಾವೆ ಸರ್. ನೋಡ್ಲಿಕ್ಕೆ ಗುಬ್ಬಚ್ಚಿಗಿಂತ ಸ್ವಲ್ಪ ದೊಡ್ಡದಿದೆ, ಆದರೆ ಗುಬ್ಬಚ್ಚಿ ಅಲ್ಲ. ಹೊಟ್ಟೆ ಮತ್ತು ಕೆಳಭಾಗ ಎಲ್ಲ ಬಿಳೀ ಬಣ್ಣ ಇದೆ, ಮೇಲಿನ ಭಾಗ ನೇರಳೆ ಮಿಶ್ರಿತ ನೀಲಿ ಬಣ್ಣ ಇದೆ. ಕೊಕ್ಕು ಚಂದದ ಕೆಂಪು ಬಣ್ಣ ಇದೆ. ಹಣೆಯ ಬಾಗದಲ್ಲಿ ಕಪ್ಪು ಬಣ್ಣ ಇದೆ. ಬಾಲ ಗಿಡ್ಡ ಇದೆ ಸರ್. ಒಂದಲ್ಲ ನಾಲ್ಕೋ ಐದೋ ಹಕ್ಕಿ ಇದೆ ಸರ್, ಈ ಪುಸ್ತಕದಲ್ಲಿ ಅದರ ಚಿತ್ರ ಇಲ್ಲ, ಅದ್ಯಾವ ಹಕ್ಕಿ ನೋಡಿ ಎಂದ.

ಮಾವಿನ ಮರದ ಹೂವಿಗೆ ಯಾವುದೋ ಹಕ್ಕಿ ಬಂದಿರಬೇಕು, ಆದರೆ ಇವನು ಇಷ್ಟೆಲ್ಲ ಬಣ್ಣ ಹೇಳುತ್ತಿದ್ದಾನೆ ಎಂದು ನಾನೂ ಮರದಕಡೆಗೆ ನೋಡಿದೆ. ಈ ಬದಿಯ ಗೆಲ್ಲಿನಲ್ಲಿವೆ ಎಂದ. ಅವನು ತೋರಿಸಿದ ಕಡೆ ನೋಡಿದರೆ ನನಗೆ ಆಷ್ಚರ್ಯವೂ ಸಂತೋಷವೂ ಒಂದೇ ಬಾರಿ ಆಯಿತು. ಸುಮಾರು ಹತ್ತು ವರ್ಷದ ಹಿಂದೆ ನಾನು ಸಂಸೆ ಶಾಲೆಯಲ್ಲಿ ಇದ್ದಾಗ ನೋಡಿ ದಾಖಲಿಸಿದ ಹಕ್ಕಿ. ಆನಂತರ ಅದನ್ನು ಎಲ್ಲೂ ನೋಡಿರಲಿಲ್ಲ. ಈಗಿನ ಶಾಲೆಯ ಆಸುಪಾಸಿನಲ್ಲಿ ಇದೇ ಮೊದಲನೆ ಬಾರಿಗೆ ನೋಡಿದ್ದು. ಸೂರಕ್ಕಿಯಂತೆ ಕೂಗುತ್ತಾ ಮಾವಿನ ಮರದ ಕೊಂಬೆಯ ಮೇಲೆ ಇರಬಹುದಾದ ಪುಟ್ಟ ಕೀಟಗಳನ್ನು ಹುಡುಕುತ್ತಾ, ಮರಕುಟಿಗ ಹಕ್ಕಿಯಂತೆ ಮರದ ಕಾಂಡವನ್ನು ಕುಟ್ಟುತ್ತಾ ಕೀಟವನ್ನು ಹುಡುಕುತ್ತಾ ಕೊಂಬೆಯ ತುಂಬ ಚುರುಕಾಗಿ ಓಡಾಡುತ್ತಿದ್ದವು. ಮರಕುಟಿಗ ಹಕ್ಕಿ ಸಾಮಾನ್ಯವಾಗಿ ಮರವನ್ನು ಕುಟ್ಟುತ್ತಾ ಕೆಳಗೆ ಬರುವುದು ವಾಡಿಕೆ. ಆದರೆ ಈ ಹಕ್ಕಿ ತಲೆಕೆಳಗೆ ಮಾಡಿಕೊಂಡು ಮರದ ಮೇಲಿಂದ ಕೆಳಗೆ ಅಥವಾ ಕೆಳಗಿಂದ ಮೇಲೆ ಯಾವುದೇ ದಿಕ್ಕಿನಲ್ಲಿ ಚುರುಕಾಗಿ ಓಡಾಡುತ್ತದೆ. ಅವುಗಳು ಹಾಗೆ ಓಡಾಡುವುದನ್ನು ನೋಡುವುದೇ ಚಂದ. ನೆಲದಮೇಲೆ ಗುಂಪಾಗಿ ಗುಬ್ಬಚ್ಚಿಗಳು ಓಡಾಡುವಂತೆ ಇವುಗಳು ಮರದ ಮೇಲೆ ಓಡಾಡುತ್ತವೆ.



ಕಾಡು ಚೆನ್ನಾಗಿರುವ ಪ್ರದೇಶಗಳಲ್ಲಿ ಘಟ್ಟ ಪ್ರದೇಶ ಮತ್ತು ಅದರ ಆಸುಪಾಸಿನಲ್ಲಿ ಈ ಹಕ್ಕಿಗಳು ಕಾಣಲು ಸಿಗುತ್ತವೆ. ಮರಕುಟಿಗ ಅಥವಾ ಕುಟ್ರು ಹಕ್ಕಿಗಳು ಬಳಸಿದ ಗೂಡುಗಳ ಜಾಗದಲ್ಲಿ ಈ ಹಕ್ಕಿಗಳು ತಮ್ಮ ಗೂಡು ಮಾಡುತ್ತವೆ ಎಂದು ಪಕ್ಷಿ ತಜ್ಞ ಸಲೀಂ ಅಲಿ ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಸುಮಾರು ಹತ್ತು ನಿಮಿಷದ ನಂತರ ಒಂದೊಂದಾಗಿ ಹಕ್ಕಿಗಳು ದೂರದ ಇನ್ನೊಂದು ಮರದ ಕಡೆಗೆ ಹಾರಿ ಹೋದವು.

**- ಅರವಿಂದ ಕುಡ್ಲ,** ಬಂಟ್ವಾಳ

## ಮಾ.1 ರಂದು ಪೊಲೀಸರಿಂದ ಮ್ಯಾರಥಾನ್ ಓಟ



**ಹಾಸನ:** ಕರ್ನಾಟಕ ಪೊಲೀಸ್ ಇಲಾಖೆ ಮತ್ತು ಎಸ್‌ಬಿಐ ಬ್ಯಾಂಕ್ ಸಹಭಾಗಿತ್ವದಲ್ಲಿ ನಮ್ಮ ಪೊಲೀಸ್, ನಮ್ಮ ಹೆಮ್ಮೆ, ಎಲ್ಲರುಗೂ ಫಿಟ್‌ನೆಸ್, ಡ್ರಗ್ಸ್ ಮುಕ್ತ ಕರ್ನಾಟಕ ಮತ್ತು ಸೈಬರ್ ಅಪರಾಧಧ ಕುರಿತು ಜಾಗೃತಿಯೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ ಓಟವನ್ನು ಮಾ.01 ರಂದು ಬೆಳಿಗ್ಗೆ 6 ಗಂಟೆಗೆ ಹಾಸನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಡೈರಿ ಸರ್ಕಲ್‌ನಿಂದ 05 ಕಿ.ಮೀ ಹಮ್ಮಿಕೊಳ್ಳಲಾಗಿದೆ.

ಮ್ಯಾರಥಾನ್ ಓಟದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ

# 5 ಕೋ. ರೂ. ರಸ್ತೆ ಕಾಮಗಾರಿಗೆ ಚಾಲನೆ

## ಗುಣಮಟ್ಟ ಕಾಯ್ದುಕೊಳ್ಳಿ: ಶಾಸಕ ಸಿಮೆಂಟ್ ಮಂಜು ಕಿವಿಮಾತು

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನಲ್ಲಿ 5 ಕೋಟಿ ರೂ.ಗಳ ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕ ಸಿಮೆಂಟ್ ಮಂಜು ಅವರು ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ತಾಲ್ಲೂಕಿನ ಮಳಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಲೆ ಬೇಲೂರು ಮುಖ್ಯ ರಸ್ತೆಯಿಂದ ಸಿದ್ದಾಪುರ ಗ್ರಾಮಕ್ಕೆ 1.20 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಹಾಗೂ ಮಳಲಿ ಗ್ರಾಮದ ಪರಿಮಿತಿಯಲ್ಲಿ 14 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿದರು.

ಹಲಸುಲಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಸಿಡೆ ಗ್ರಾಮದ ಪರಿಮಿತಿಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ, ಮಾವಸವಹಳ್ಳಿ ಗ್ರಾಮದ ಪರಿಮಿತಿಯಲ್ಲಿ 19 ಲಕ್ಷ ರೂ ವೆಚ್ಚದಲ್ಲಿ ರಸ್ತೆ ನಿರ್ಮಾಣಕ್ಕೆ ಚಾಲನೆ ದೊರೆಯಿತು.

66 ಲಕ್ಷ ರೂ ವೆಚ್ಚದಲ್ಲಿ ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಂಬರಡಿ ಮುಖ್ಯ ರಸ್ತೆಯಿಂದ ಬಾರೆಮಕ್ಕಿ ಮತ್ತು ಚಿಕ್ಕತೋಟ ಗ್ರಾಮಗಳಿಗೆ ಸಂಪರ್ಕಿಸುವ ರಸ್ತೆ ನಿರ್ಮಾಣ, 31 ಲಕ್ಷ ರೂ. ವೆಚ್ಚದಲ್ಲಿ ಬೆಂಬಳೆ ಮತ್ತು ಮಟದೀಣೆ ಗ್ರಾಮಗಳಲ್ಲಿ ರಸ್ತೆ ಮತ್ತು ಒಳಚರಂಡಿ ಕಾಮಗಾರಿ, ಕುಂಬರಡಿ ಗ್ರಾಮದಲ್ಲಿ 33 ಲಕ್ಷ ರೂ. ವೆಚ್ಚದಲ್ಲಿ ಆದಿಶಕ್ತಿ ಮತ್ತು ಭೈರವೇಶ್ವರ ದೇವಸ್ಥಾನದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.



ಹೆಬ್ಬಸಾಲೆ ಮುಖ್ಯ ರಸ್ತೆಯಿಂದ ಗ್ರಾಮದ ಒಳಗಡೆ ಸಂಪರ್ಕಿಸುವ 80 ಲಕ್ಷರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾನುಬಾಳು ಮುಖ್ಯ ರಸ್ತೆಯಿಂದ (ಗಾಣದಹೊಳೆ) ಮಾವಿನಕೋಲು ರಸ್ತೆವರೆಗೆ 65 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ, ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೇಖಾಲ ಮುಖ್ಯ ರಸ್ತೆಯಿಂದ ಶಿವಲಿಂಗೇಶ್ವರ ದೇವಸ್ಥಾನದವರೆಗೆ 50 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಸಿಮೆಂಟ್ ಮಂಜು, ಎಲ್ಲಾ ಕಾಮಗಾರಿಗಳನ್ನು ಗುತ್ತಿಗೆದಾರರು ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಬಾಳಿಕೆ ಬರುವಂತೆ ಕಾಮಗಾರಿ ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳು, ಸ್ಥಳೀಯ ಮುಖಂಡರು ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಹೊಗೆಸೊಪ್ಪು ಬೆಲೆ ಕುಸಿತ: ನಷ್ಟದ ಸುಳಿಯಲ್ಲಿ ಬೆಳೆಗಾರ

» ಮೊದಲನೇ ಪುಟದಿಂದ

ಉತ್ತಮ ದರ್ಜೆ ತಂಬಾಕಿಗೆ 320 ರೂ. ಗರಿಷ್ಟ ದರ ಸಿಗುತ್ತಿತ್ತು. ಗರಿಷ್ಟ ದರಕ್ಕಿಂತ ಕೆಳಕ್ಕೆ ಇಳಿಕೆ ಮಾಡಲು ಹಿಂದೇಟು ಹಾಕಿದ ವರ್ತಕರು ಕೆಳ ದರ್ಜೆ ತಂಬಾಕು ಕೊಳ್ಳಲು ಕೂಡ ಹಿಂದೇಟು ಹಾಕಿದ್ದರು. ಈಗ ಕೆಳ ದರ್ಜೆಯ ಹೊಗೆಸೊಪ್ಪು ಕೊಳ್ಳಲು ಮುಂದಾದರೂ ಬೆಲೆ ಸುಧಾರಣೆ ಕಂಡಿಲ್ಲ. ಮಾರುಕಟ್ಟೆಯಲ್ಲಿ ಕಳಪೆ ದರ್ಜೆಯ ಹೊಗೆಸೊಪ್ಪಿನ ಜೊತೆಗೆ ಉತ್ತಮ ದರ್ಜೆ ತಂಬಾಕಿ ದರ ಕೂಡ ಪಾತಾಳ ಕಂಡಿದೆ.

ಕಳೆದ ಸಲ ಆಂಧ್ರಪ್ರದೇಶದಲ್ಲಿ ನಡೆದ ತಂಬಾಕು ಹರಾಜಿನಲ್ಲಿ ಒಂದು ಕೆ.ಜಿ. ಹೊಗೆಸೊಪ್ಪಿನ ಗರಿಷ್ಟ ದರ 412 ರೂ. ದಾಟಿತ್ತು. ಹೀಗಾಗಿ ಉತ್ಕೃಷ್ಟ ದರ್ಜೆಯ ತಂಬಾಕು ಉತ್ಪಾದನೆಗೆ ಹೆಸರಾದ ಇಲ್ಲಿನ ಮಾರುಕಟ್ಟೆಯಲ್ಲಿಯೂ ಅದೇ ಗರಿಷ್ಟ ದರ ಸಿಗುವ ಆಶಾಭಾವನೆ ರೈತರಲ್ಲಿ ಚಿಗುರೊಡೆದಿತ್ತು. ದುರಾದೃಷ್ಟವಶಾತ್ ಈಗಿನ ಗರಿಷ್ಟ ದರವೂ ಇಳಿಕೆ ಕಂಡಿದ್ದು ಬೆಳೆಗಾರರ ಆಸೆಗೆ ತಣ್ಣೀರೆರಚಿದೆ. ಅತಿವೃಷ್ಟಿ ಪರಿಣಾಮ ತಂಬಾಕು ಉತ್ಪಾದನೆ ಇಳುವರಿ ಕುಂಠಿತಗೊಡಿದೆ. ತಂಬಾಕು ಗುರಿ ನಿಗದಿಪಡಿಸಿದ್ದ 100 ಮಿಲಿಯನ್ ಕೆ.ಜಿ. ಬದಲಿಗೆ ಅಂದಾಜು 80 ಮಿಲಿಯನ್ ಕೆ.ಜಿ.ಯಷ್ಟೇ ಉತ್ಪಾದನೆಯಾಗಿದೆ. ಅದರಿಂದ ಉತ್ಪಾದಿತ ತಂಬಾಕಿಗೆ ಗರಿಷ್ಟ ದರ ಅಂದಾಜಿಸಿದ್ದ ನಿರೀಕ್ಷೆ ಕೂಡ ತಲೆಕೆಳಗಾಗಿದೆ. ಮಾರುಕಟ್ಟೆಯಲ್ಲಿ ಬೆಲೆ ಸ್ಥಿರತೆ ಮರೀಚಿಕೆಯಾಗಿದ್ದು ಒಂದೆಡೆ ಅತಿವೃಷ್ಟಿಯಿಂದ ಇಳುವರಿ ಕಳೆದುಕೊಂಡಿರುವ ರೈತರಿಗೆ ಮತ್ತೊಂದೆಡೆ ಹರಾಜಿನಲ್ಲಿಯೂ ಗರಿಷ್ಟ ದರದ ಲಾಭ ದೊರೆಯದಂತಾಗಿದೆ.

## ಸ್ಥಳೀಯ ಸಂಸ್ಥೆ ಚುನಾವಣೆ ಗೆಲುವಿಗೆ ಪಕ್ಷ ಬಲಪಡಿಸಿ

» ಮೊದಲನೇ ಪುಟದಿಂದ

ರೂ. ವೆಚ್ಚದಲ್ಲಿ ಹನಿಕೆ ಹಾಗು ಬಿಕ್ಕೋಡು ವಿದ್ಯುತ್ ಸಂಗ್ರಹ ಘಟಕಗಳ ಟೆಂಡರ್ ಪ್ರಕ್ರಿಯೆ ನಡೆದಿದೆ. ಹಳೇಬೀಡು, ಗಂಗೂರು, ಹಗರೆ ಗ್ರಾಮಗಳಲ್ಲಿ ವಿದ್ಯುತ್ ಸಾಮರ್ಥ್ಯ ದ್ವಿಗುಣಗೊಳಿಸಲಾಗಿದೆ. ಅಡಗೂರಿನಲ್ಲಿ 20 ಎಕರೆ ಜಮೀನಿನ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ದ್ವಾರ ಸಮುದ್ರ ಕೆರೆಗೆ ಎತ್ತಿನಹೊಳೆ ಯೋಜನೆಯಡಿ ನೀರು ತುಂಬಿಸಲಾಗಿದೆ. ರೈತರು ಅದನ್ನು ಮನಗಂಡು ಪ್ರಯೋಜನ ಪಡೆಯಬೇಕು. ಭೂ ಹಕ್ಕಿಲ್ಲದೇ ಜಮೀನು ಹೊಂದಿರುವ ರೈತರು ಖಾತೆ ಮಾಡಿಸಿಕೊಳ್ಳದಿದ್ದರೆ ಭವಿಷ್ಯದಲ್ಲಿ ಅರಣ್ಯ ಇಲಾಖೆಗೆ ಜಮೀನು ಸೇರುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಹಳೇಬೀಡಿನಲ್ಲಿ ಗ್ರಾಮಾಂತರ ಹಾಗೂ ಹೋಬಳಿ ಮಟ್ಟದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಕಾರ್ಯಗಾರ ನಡೆಯಿತು. ಬೂತ್ ಮಟ್ಟದ ಏಜೆಂಟ್‌ರನ್ನು ಪ್ರಥಮ ಬಾರಿಗೆ ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ನೇಮಕ ಮಾಡಲಾಯಿತು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಅಭಿನಂದನೆ ಸಲ್ಲಿಸಲಾಯಿತು.

ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ದೇಶಣಿ ಆನಂದ್, ಕೆಪಿಸಿಸಿ ವೀಕ್ಷಕರಾದ ವಿಜಯಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಶಶಿಧರ್, ಸಂತೋಷ್, ಯುವ ಕಾಂಗ್ರೆಸ್ ಅಧ್ಯಕ್ಷ ಶರತ್, ಚಂದ್ರಶೇಖರ್, ಬೈರೇಶ್, ವೀರಣ್ಣ, ಯತೀಶ್ ಉಪಸ್ಥಿತರಿದ್ದರು.

## ಬಾಗಲಕೋಟೆ ಪ್ರಕರಣ ಖಂಡಿಸಿ ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಉತ್ಸವ ಅಂಗವಾಗಿ ಸಾಗುತ್ತಿದ್ದ ಮೆರವಣಿಗೆ ಮೇಲೆ ಚಪ್ಪಲಿ ಹಾಗು ಕಲ್ಲು ಎಸೆದ ಪ್ರಕರಣ ಖಂಡಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ಶನಿವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಧರ್ಮನಾಯಕ್ ಅವರು, ಶಿವಾಜಿ ಜಯಂತಿ ಮೆರವಣಿಗೆ ವೇಳೆ ಬಾಗಲಕೋಟೆಯಲ್ಲಿ ನಡೆದಿರುವ ಘಟನೆ ಸಹಿಸಲಾಗದು. ಶಾಂತಿಯುತವಾಗಿ ನಡೆಯುತ್ತಿದ್ದ ಮೆರವಣಿಗೆ ಮೇಲೆ ಚಪ್ಪಲಿ ಹಾಗು ಕಲ್ಲು ಎಸೆದಿರುವ ಜಿಹಾದಿಗಳ ಮನಸ್ಥಿತಿಯನ್ನು ಖಂಡಿಸಿದರು.

ಶಾಂತಿಯುತವಾಗಿರುವ ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ನಿಟ್ಟಿನಲ್ಲಿ ಕೆಲ ಜಿಹಾದಿಗಳು ನಡೆದುಕೊಂಡಿದ್ದಾರೆ. ಜಿಲ್ಲಾಡಳಿತ ಹಾಗು ಪೊಲೀಸ್ ಇಲಾಖೆ ಮತ್ತು ರಾಜ್ಯ ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು.

ಇಂತಹ ಹಿತಕರ ಘಟನೆಗಳಿಂದ ಸಮಾಜದಲ್ಲಿ ಅಶಾಂತಿ ವಾತಾವರಣ ಸೃಷ್ಟಿಯಾಗುತ್ತಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಗೃಹ ಸಚಿವರು ಕೂಡಲೇ ಎಚ್ಚೆತ್ತುಕೊಂಡು ಇದನ್ನು ಸಮಗ್ರ ತನಿಖೆ ನಡೆಸಿ ತಪ್ಪಿದ ಸ್ಥಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ರೀತಿಯ ಅಹಿತಕರ ಘಟನೆ ಮುಂದೆಂದೂ ಮರುಕಳಿಸಬಾರದು ಎಂದು ಒತ್ತಾಯಿಸಿದರು.

# ಸಾರ್ವಜನಿಕ ಸಮಸ್ಯೆಗೆ ಸ್ಪಂದಿಸಲು ನಿರ್ಲಕ್ಷ್ಯ ಬೇಡ

» ಮೊದಲನೇ ಪುಟದಿಂದ

ಈ ತನಕ ಪಿಂಚಣಿ ಬರುತ್ತಿಲ್ಲ. ಜಮೀನು ಇದೆಯಾದರೂ ನಿರೀಕ್ಷಿತ ಆದಾಯ ಬರುತ್ತಿಲ್ಲ. ಇಳಿ ವಯಸ್ಸಿನಲ್ಲಿ ವೈದ್ಯಕೀಯ ಖರ್ಚಿಗೂ ಪರದಾಡುವಂತಾಗಿದೆ. ಕೃಷಿ ಇಲಾಖೆಯಿಂದ ನೀಡುವ ಕಿಸಾನ್ ಪಿಂಚಣಿಗೆ ಅರ್ಜಿ ಸಲ್ಲಿಸಿದರೂ ಅಧಿಕಾರಿಗಳು ತಿರಸ್ಕರಿಸಿದ್ದಾರೆ. ಕನಿಷ್ಟ ಪಿಂಚಣಿ ಬರುವಂತೆ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿ ಅವರನ್ನು ಕೈಮುಗಿದು ಬೇಡಿಕೊಂಡರು.

**ಅರ್ಜಿ ಸ್ವೀಕರಿಸದ ಪಿಡಿಒ**

ಬೇಲೂರು ತಾಲ್ಲೂಕಿನ ಟಿ. ಎಂ.ರಾಜಶೇಖರ್ ಹಾಗು ಇತರರು ಮನವಿ ಸಲ್ಲಿಸಿ, ಸರ್ಕಾರಿ ಜಾಗದಲ್ಲಿ ಸಾರ್ವಜನಿಕ ರಸ್ತೆಗೆ ಅನುಕೂಲ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿ ಆದೇಶವಿದ್ದರೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಿಮ್ಮ ಆದೇಶವನ್ನು ಧಿಕ್ಕರಿಸಿ ನಮ್ಮ ಅರ್ಜಿ ತಿರಸ್ಕರಿಸಿದ್ದಾರೆಂದು ಗಂಭೀರ ಆರೋಪ ಮಾಡಿದರು.

ಅರೇಹಳ್ಳಿ ಹೋಬಳಿ ನಾಗೇನಹಳ್ಳಿ, ಮೆಣಸಿನ ಮನೆ ಮತ್ತು ಹಂಜಿಹಳ್ಳಿ ಗ್ರಾಮಗಳಿಗೆ ತಿರುಗಾಡುವ ಉದ್ದೇಶಕ್ಕಾಗಿ ಸರ್ವೆ ನಂ.35ರ ಸರ್ಕಾರಿ ಜಾಗವನ್ನು 2011ರಲ್ಲಿ ಜಿಲ್ಲಾಡಳಿತ ಕಾಯ್ದಿರಿಸಿದೆ. 2021ರ ವರೆಗೆ ಗ್ರಾಮಸ್ಥರು ಆ ರಸ್ತೆಯಲ್ಲಿ ಓಡಾಡಿಕೊಂಡಿದ್ದರು. ಆದರೆ ಆ ಬಳಿಕ ತಂತಿ ಬೇಲಿಯಿಂದ ರಸ್ತೆ ಬಂದ್ ಮಾಡಿ ಕಾಫಿ ತೋಟ ಮಾಡಿಕೊಂಡಿದ್ದಾರೆ. 2025ರಲ್ಲಿ ಬೇಲೂರು ತಹಶೀಲ್ದಾರ್ ಸಹ ದಾರಿ ಖುಲ್ಲಾ ಮಾಡಿಸಿದ್ದರು. 2026ರ ಜ.3ರಂದು ತಹಶೀ ಲ್ದಾರ್, ಉಪ ತಹಶೀಲ್ದಾರ್, ತಾಲ್ಲೂಕು ಸರ್ವೆ ಅಧಿಕಾರಿಗಳು ಸಮೀಕ್ಷೆ ನಡೆಸಿ ಸರ್ವೆ ಆಧಾರಿತ ಪತ್ರವನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ನೀಡಿದ್ದರು. ಅದನ್ನು ಸ್ವೀಕರಿಸಲು ಅಧಿಕಾರಿ ನಿರಾಕರಿಸಿದ್ದಾರೆ. ಜಿಲ್ಲಾಡಳಿತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ನಮಗೆ ಜಾಗ ಬಿಡಿಸಿ ಕೊಡಬೇಕೆಂದು ಒತ್ತಾಯಿಸಿದರು.



**ಅತಂತ್ರ ಸ್ಥಿತಿಯಲ್ಲಿ ಕುಟುಂಬಗಳು**

ಹಾಸನದ ಬೀರನಹಳ್ಳಿ ಕೆರೆ ವ್ಯಾಪ್ತಿಯಲ್ಲಿ ವಾಸವಿದ್ದ 73 ಕುಟುಂಬಗಳನ್ನು ರಾಜಕೀಯ ದ್ವೇಷಕ್ಕಾಗಿ ಯಾವ ಸೂಚನೆ ನೀಡದೆ 2007ರಲ್ಲಿ ಮನೆಗಳಿಂದ ಹೊರಹಾಕಿದರು. ಸಂತ್ರಸ್ತ ಕುಟುಂಬಗಳಿಗೆ ಎಸ್.ಎಂ.ಕೃಷ್ಣ ಬಡಾವಣೆಯಲ್ಲಿ ಮನೆ ನಿರ್ಮಿಸಿಕೊಡುವುದಾಗಿ ಭರವಸೆ ಮೂಡಿಸಿದ್ದರು ಮಾತ್ರವಲ್ಲದೆ ನಿವೇಶನ ಗುರುತಿಸಿದ್ದರು. ಸಂತ್ರಸ್ತರಿಗೆ ಹಕ್ಕುಪತ್ರ ನೀಡಲಾಗಿದೆಯಾದರೂ ಅದರಿಂದ ಯಾವ ಪ್ರಯೋಜನವೂ ಇಲ್ಲ. ನಮಗೆ ನಿಗದಿಯಾಗಿದ್ದ ಜಾಗ ಹುಡಾಗೆ ಸೇರಿದ್ದು, ಉಚಿತವಾಗಿ ನಿವೇಶನ ನೀಡಲು ಸಾಧ್ಯವಿಲ್ಲವೆಂದು ಸಬೂಬು ಹೇಳಿ ಆ ಜಾಗದಲ್ಲಿ ಪಾರ್ಕ್ ನಿರ್ಮಿಸಿದ್ದಾರೆ. ಹೀಗಾಗಿ ನೂರಾರು ಕುಟುಂಬಗಳು ಇಂದಿಗೂ ಗುಡಿಸಲುಗಳಲ್ಲೇ ವಾಸಿಸುವಂತಾಗಿದೆಯೆಂದು ಅಳಲು ತೋಡಿಕೊಂಡರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣವರ್, ತಹಶೀಲ್ದಾರ್‌ಗಳಾದ ಶ್ರೀಧರ್ ಕಂಕಣವಾಡಿ, ಗೀತಾ, ಶಿವಶಂಕರಪ್ಪ, ಭೂದಾಖಲೆಗಳ ಉಪ ನಿರ್ದೇಶಕಿ ಹೇಮಲತಾ, ಪೌರಾಯುಕ್ತ ಆರ್.ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ದೂದ್‌ಪೀರ್ ಮತ್ತಿತರರಿದ್ದರು.

## 3.40 ಕೋ.ರೂ. ಲಪಟಾಯಿಸಿದ ಎಟಿಎಂ ಕಸ್ಟೋಡಿಯನ್

» ಮೊದಲನೇ ಪುಟದಿಂದ

ಪೊಲೀಸರು ತನಿಖೆ ಚುರುಕುಗೊಳಿಸಿ, ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ಈ ಕುರಿತು ಸಿಎಂಎಸ್ ಸಂಸ್ಥೆಯ ಕರ್ನಾಟಕ ಉಸ್ತುವಾರಿ, ನಿವೃತ್ತ ಎಎಸ್ಪಿ ನಟರಾಜ್ ಅವರು ಮಾತನಾಡಿ, ನಗರದ ಮಾರ್ಗ-1ರ ವ್ಯಾಪ್ತಿಯ 18 ಎಟಿಎಂಗಳ ಜವಾಬ್ದಾರಿ ನಂದೀಶ್ ಮತ್ತು ಮಧು ಕುಮಾರ್‌ಗೆ ನೀಡಲಾಗಿತ್ತು. ಫೆ.8 ರಂದು ನಡೆದ ನಿಯಮಿತ ಆಡಿಟ್ ವೇಳೆ ಎಲ್ಲವೂ ಸರಿಯಾಗಿತ್ತು. ನಂತರ ಶಾಖಾ ವ್ಯವಸ್ಥಾಪಕ ರಾಜು ಅವರು ಪರಿಶೀಲನೆ ನಡೆಸಿದಾಗ ಕೆಲ ಎಟಿಎಂಗಳಲ್ಲಿ ಹಣದ ಕೊರತೆ ಇರುವುದು ಕಂಡು ಬಂದಿದೆ. ತಕ್ಷಣ ಸಮಗ್ರ ಆಡಿಟ್ ನಡೆಸಿದಾಗ ದೊಡ್ಡ ಪ್ರಮಾಣದ ಹಣ ದುರುಪಯೋಗವಾಗಿರುವುದು ಕಂಡು ಬಂದಿದೆ.

ಎಟಿಎಂಗೆ ಹಣ ಹಾಕುವುದು ಹಾಗು ನಿರ್ವಹಣೆ ಮಾಡುವ ಎಲ್ಲಾ ಜವಾಬ್ದಾರಿ ಇಬ್ಬರದ್ದೇ ಆಗಿದ್ದು, ಎಟಿಎಂ ತೆರೆಯುವ ಪಾಸ್‌ವರ್ಡ್ ಕೂಡ ಅವರ ಬಳಿಯೇ ಇರುತ್ತದೆ. ಹೀಗಾಗಿ, ಅವರ ಹೊರತಾಗಿ ಬೇರೆ ಯಾರಿಂದಲೂ ಹಣ ತೆಗೆಯಲು ಸಾಧ್ಯವಿಲ್ಲ ಎಂಬುದು ಪ್ರಾಥಮಿಕ ಮಾಹಿತಿ. ಹಣ ತುಂಬಿಸುವ ಮೊತ್ತ ಮತ್ತು ಗ್ರಾಹಕರು ಡ್ರಾ ಮಾಡಿದ ಮೊತ್ತವನ್ನು ಹೋಲಿಕೆ ಮಾಡಿದಾಗ ಮಾತ್ರ ಇಂತಹ ಅಕ್ರಮ ಬಯಲಾಗುತ್ತವೆ ಎಂದು ಸ್ಪಷ್ಟಪಡಿಸಿದರು.

ಸಿಎಂಸಿ ಯಂತ್ರದ ಮೂಲಕ 200 ಎಟಿಎಂ ಹಾಸನ ಜಿಲ್ಲೆಯಲ್ಲಿವೆ. ಆರೇಳು ರೂಟ್ ನಮ್ಮಲಿದೆ. ಅದರ ಒಂದು ರೂಟಿನಲ್ಲಿ ನಂದೀಶ್ ಮತ್ತು ಮಧು ಕುಮಾರ್ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇದೀಗ ಇವರೇ ತಪ್ಪು ಮಾಡಿದ್ದಾರೆ ಎಂಬುದು ಸರ್‌ಪ್ರೈಜ್ ಆಡಿಟ್ ವೇಳೆ ಗೊತ್ತಾಗಿದೆ. ಎಟಿಎಂ ಓಪನ್ ಮಾಡಲು ಅವರಿಬ್ಬರಿಗೇ ಅಧಿಕಾರ ಇದೆ. ಆಡಿಟ್ ಮಾಡುವಾಗಲೂ ಅವರು ಇರಬೇಕು. ಆಡಿಟ್ ವೇಳೆ 18 ಎಟಿಎಂ ವ್ಯಾಪ್ತಿಯಲ್ಲಿ ಹಣ ಸ್ವಾಹ ವಿಚಾರ ಬೆಳಕಿಗೆ ಬಂದಿದ್ದು, ತನಿಖೆ ಮುಂದುವರಿದಿದೆ ಎಂದು ಸ್ಪಷ್ಟಪಡಿಸಿದರು.

## ಹಿಮೋಫಿಲಿಯಾ ರೋಗಿಗಳಿಗೂ ಗೌರವದ ಬದುಕಿರಲಿ

### ರೋಗದ ಬಗ್ಗೆ ಗ್ರಾಮೀಣ ಭಾಗಗಳಲ್ಲಿ ಅರಿವಿನ ಕೊರತೆ

• ಪ್ರಜೋದಯ ವರದಿ

**ಹಾಸನ:** ಹಿಮೋಫಿಲಿಯಾ ಅಪರೂಪದ ರೋಗವಾದರೂ ಅದರ ನೋವು ಮತ್ತು ಸಂಕಷ್ಟಗಳು ರೋಗಿ ಹಾಗೂ ಕುಟುಂಬದ ಜೀವನವನ್ನೇ ಬದಲಾಯಿಸುತ್ತವೆ. ರೋಗಿಗಳ ಆರೋಗ್ಯ ಭದ್ರತೆ ಮತ್ತು ಗೌರವಯುತ ಬದುಕಿಗಾಗಿ ಪ್ರತಿಯೊಬ್ಬರೂ ಕೈ ಜೋಡಿಸಬೇಕೆಂದು ಪದ್ಮಶ್ರೀ ಪುರಸ್ಕೃತ ಡಾ|| ಸುರೇಶ್ ಹನಗವಾಡಿ ಅವರು ಹೇಳಿದರು.

ನಗರದ ನಂದಗೋಕುಲ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ವೈದ್ಯರ ಹಬ್ಬ-2026 ಹಾಗು ನ್ಯೂಬರ್ಗ್ ಆನಂದದಾಸ್ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿಯ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಹಿಮೋಫಿಲಿಯಾ ರೋಗದ ಸ್ವರೂಪ, ರಕ್ತದ ಸಮಸ್ಯೆಯಿಂದ ಉಂಟಾಗುವ ಗಂಭೀರ ಪರಿಣಾಮ ಹಾಗು ತಡವಾದ ಚಿಕಿತ್ಸೆಯಿಂದ ಎದುರಾಗುವ ಅಪಾಯ ಹೆಚ್ಚಿದೆ. ಹಿಮೋಫಿಲಿಯಾ ಕುರಿತು ಗ್ರಾಮೀಣ ಭಾಗಗಳಲ್ಲಿ ಅರಿವಿನ ಕೊರತೆ ಇದೆ. ಸಮಯೋಚಿತ ಪರೀಕ್ಷೆ, ಸರಿಯಾದ ಮಾರ್ಗದರ್ಶನ ಮತ್ತು ನಿರಂತರ ಚಿಕಿತ್ಸೆ ಮೂಲಕ ರೋಗಿಗಳು ಸಾಮಾನ್ಯ ಜೀವನ ನಡೆಸಲು ಸಾಧ್ಯವಿದೆಯೆಂದರು.



ಈ ನಿಟ್ಟಿನಲ್ಲಿ ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯು ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡು ರೋಗಿಗಳಿಗೆ ನೆರವಾಗುತ್ತಿದೆ ಎಂದರು.

ಭಾರತೀಯ ವೈದ್ಯಕೀಯ ಸಂಘದ ಹಾಸನ ಶಾಖೆಯ ಅಧ್ಯಕ್ಷ ಡಾ|| ಎನ್. ಶ್ರೀರಂಗ ಕಾರ್ಯಕ್ರಮ ಉದ್ಘಾಟಿಸಿದರು. ಆನಂದದಾಸ್ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿಯ ಡಾ|| ಹೆಚ್.ಆರ್. ದೇವದಾಸು ಸ್ವಾಗತಿಸಿದರು. ನ್ಯೂಬರ್ಗ್ ಗ್ರೂಪ್‌ನ ಮುಖ್ಯ ವೈದ್ಯಕೀಯ ನಿರ್ದೇಶಕ ಡಾ|| ಸುಜಯ್ ಪ್ರಸಾದ್ ಅವರು ವೈದ್ಯಕೀಯ ಕ್ಷೇತ್ರದಲ್ಲಿ ನವೀಕರಣ ಮತ್ತು ಗುಣಮಟ್ಟದ ಸೇವೆಗಳ ಅಗತ್ಯತೆಯನ್ನು ಒತ್ತಿ ಹೇಳಿದರು.

ಡಾ|| ಸುರೇಶ್ ಹನಗವಾಡಿ ಹಾಗು ಅವರ ಪತ್ನಿ ಡಾ|| ಮೀರಾ ಎಸ್.ಹನಗವಾಡಿ, ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಕಾರ್ಯಕಾರಿ ಅಧಿಕಾರಿ ನವೀನ್ ಹವಳಿ ಅವರನ್ನು ಸನ್ಮಾನಿಸಲಾಯಿತು.

# ವಿದ್ಯಾರ್ಥಿಗಳಿಗೆ ಕಲಿಕಾ ಹಂತದಲ್ಲೇ ವ್ಯವಹಾರ ಜ್ಞಾನ ಅಗತ್ಯ

### ಉತ್ತೇನಹಳ್ಳಿ ಸಿಂಹಾದ್ರಿ ಶಾಲೆಯಲ್ಲಿ ಮಕ್ಕಳ ಸಂತೆ-ಆಹಾರ ಮೇಳ | ಗಮನಸೆಳೆದ ತಿಂಡಿ-ತಿನಿಸುಗಳು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ವಿದ್ಯಾರ್ಥಿಗಳಿಗೆ ಕಲಿಕಾ ಹಂತದಲ್ಲೆ ವ್ಯಾಪಾರ ಹಾಗೂ ವ್ಯವಹಾರದ ಜ್ಞಾನ ಅಗತ್ಯ, ಇದನ್ನು ಪ್ರಾಯೋಗಿಕವಾಗಿ ಮಕ್ಕಳು ಕಲಿಯಲೆಂಬ ಉದ್ದೇಶದೊಂದಿಗೆ ಮಕ್ಕಳ ಸಂತೆ, ಮತ್ತು ಆಹಾರಮೇಳವನ್ನು ನಮ್ಮ ಶಾಲೆಯಲ್ಲಿ ಪ್ರತಿವರ್ಷ ಆಯೋಜನೆ ಮಾಡುತ್ತಿರುವುದಾಗಿ ಸಂಸ್ಥೆಯ ಅಧ್ಯಕ್ಷೆ ಚಂದ್ರಕಲಾ ಮಂಜೇಗೌಡ ತಿಳಿಸಿದರು.

ತಾಲ್ಲೂಕಿನ ಶ್ರವಣಬೆಳಗೊಳ ಹೋಬಳಿ ಉತ್ತೇನಹಳ್ಳಿಯಲ್ಲಿನ ಸಿಂಹಾದ್ರಿ ಸ್ಕೂಲ್ ಆಫ್ ಎಕ್ಸ್ ಲೆನ್ಸ್ ಶಾಲೆಯಲ್ಲಿ ಮಕ್ಕಳ ಕೌಶಲ್ಯಾಭಿವೃದ್ಧಿ ಹೆಚ್ಚಿಸುವ ಸಲುವಾಗಿ ಅವರಲ್ಲಿ ವ್ಯವಹಾರ ಜ್ಞಾನ ಹೆಚ್ಚಳದೊಂದಿಗೆ ಗಣಿತದಲ್ಲಿ ಉತ್ತಮ ಕಲಿಕೆಗೆ ಸಹಕಾರಿಯಾಗಲೆಂದು 2025-26ನೇ ಸಾಲಿನ ಮಕ್ಕಳ ಸಂತೆಯನ್ನು ಸಂಸ್ಥೆಯ ಆವರಣದಲ್ಲಿ ಶನಿವಾರ ಆಯೋಜಿಸಲಾಗಿತ್ತು.

ಆಯೋಜನೆಗೊಂಡಿದ್ದ ಮಕ್ಕಳ ಸಂತೆಯನ್ನು ಸಿಂಹಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಚಂದ್ರಕಲಾ ಮಂಜೇಗೌಡ ಅವರು ಉದ್ಘಾಟನೆ ನೆರವೇರಿಸಿ ಮಾತನಾಡಿ, ಮಕ್ಕಳಲ್ಲಿ ಚಿಕ್ಕಂದಿನಿಂದಲೇ ವ್ಯವಹಾರ ಜ್ಞಾನ ಹೆಚ್ಚಲ್ಲಿ ಎಂಬ ಉದ್ದೇಶದಿಂದ ಪ್ರತಿವರ್ಷ ಮಕ್ಕಳ ಸಂತೆಯನ್ನು ಆಯೋಜಿಸಲಾಗುತ್ತಿದೆ. ಮಕ್ಕಳು ತಮ್ಮ ಕಲಿಕೆಯೊಂದಿಗೆ ಗಣಿತ, ವಿಜ್ಞಾನದಲ್ಲಿ ಹೆಚ್ಚು ಕೌಶಲ್ಯ ಸಾಧಿಸಲಿ ಎಂಬ ಉದ್ದೇಶದೊಂದಿಗೆ ಪ್ರತಿವರ್ಷ ಮಕ್ಕಳ ಸಂತೆ ಮತ್ತು ಆಹಾರ ಮೇಳವನ್ನು ನಡೆಸಲಾಗುತ್ತಿದೆ. ಶೈಕ್ಷಣಿಕ ಹಂತದಿಂದಲೇ ವಿದ್ಯಾರ್ಥಿಗಳಿಗೆ ಭೋಧನೆಯ ಜತೆಗೆ ವ್ಯವಹಾರ ಜ್ಞಾನ ಬೆಳೆಸಬೇಕು, ಪೂರ್ವಿಕರು ಮಾಡಿಟ್ಟಿರುವ ಜಮೀನು ಜೀವನಕ್ಕೆ ಆಸರೆಯಾಗಲಿದ್ದು, ಪಾಲಕರು ಕೂಡಿಟ್ಟ ಹಣ ಬದುಕಿಗೆ ನೆರವಾಗಲಿದೆ, ಅವೆಲ್ಲವನ್ನು ಉಳಿಸಿಕೊಳ್ಳಲು ಜ್ಞಾನ ಅತ್ಯಗತ್ಯ, ಆದರೆ ಶಿಕ್ಷಣ ಅಷ್ಟಕ್ಕೆ ಸೀಮಿತವಾಗಬಾರದು, ಬದಲಿಗೆ ದೇಶದ ಆರ್ಥಿಕತೆ ಸಾಗುತ್ತಿರುವ ಗಮನಹರಿಸಿ ವ್ಯಾಪಾರ ಕ್ಷೇತ್ರದಲ್ಲಿ ತೊಡಗಿಕೊಂಡು ಸಮಾಜದಲ್ಲಿ ಗುರುತಿಸಿಕೊಳ್ಳಬೇಕು ಎಂಬುದು ಇದರ ಉದ್ದೇಶವಾಗಿದೆ ಎಂದರು.



ಇನ್ನೂ ಸಂಸ್ಥೆಯ ಆವರಣದಲ್ಲಿ ನಡೆಸಲಾದ ಮಕ್ಕಳ ಸಂತೆಯಲ್ಲಿ ಸುಮಾರು 100ಕ್ಕೂ ಹೆಚ್ಚು ವ್ಯಾಪಾರ ಕೇಂದ್ರಗಳನ್ನು ತೆರೆದು ವಿದ್ಯಾರ್ಥಿಗಳು ಅತ್ಯಂತ ಉತ್ಸಾಹ, ಲವಲವಿಕೆಯಿಂದ ವ್ಯಾಪಾರ ನಡೆಸಿದರು. ಅಕ್ಕಪಕ್ಕದ ಹಳ್ಳಿಗಳಿಂದಾಗಮಿಸಿದ ರೈತರು, ಸಾರ್ವಜನಿಕರು, ಮಕ್ಕಳ ಪೋಷಕರು ಸಂತೆಯಲ್ಲಿ ವ್ಯಾಪಾರ ನಡೆಸಿದರು. ಸಂತೆಯಲ್ಲಿ ತರಕಾರಿ, ತೆಂಗಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಬೆಲ್ಲದಂಗಡಿ ಸೇರಿ ದಿನಸಿ ಪದಾರ್ಥಗಳ ಮಳಿಗೆಗಳು ಹಾಗೂ ಆಹಾರ ಮಳಿಗೆಗಳಾದ ಬಿಸಿಬಿಸಿ ಬಜ್ಜಿ, ವಡಾಪಾವು, ಪಾನಿಪೂರಿ, ಗೋಬಿ ಮಂಚೂರಿ, ಚುರುಮುರಿ, ಬ್ರೆಡ್‌ರೋಸ್ಟ್, ಪಲಾವು, ಫ್ರೂಟ್ ಸಲಾಡ್, ಬಾದಾಮಿ ಜ್ಯೂಸ್, ಮೊಸರು, ಮಸಾಲ ಮಜ್ಜಿಗೆ, ಜಾಮೂನ್, ಚಿಕನ್ ಬಿರಿಯಾನಿ, ಕಬಾಬ್, ಸೇರಿದಂತೆ ನಾನಾ ತಿನಿಸುಗಳ ಸ್ಟಾಲ್‌ಗಳು ಗ್ರಾಹಕರ ಬಾಯಲ್ಲಿ ನೀರೂರಿಸಿದವು, ವಿದ್ಯಾರ್ಥಿಗಳು ಗ್ರಾಹಕರನ್ನು ತಮ್ಮತ್ತ ಆಕರ್ಷಿಸಿ ಕರೆದು ವ್ಯಾಪಾರ ಮಾಡಿ ಸಂಭ್ರಮಿಸಿದರು.

ಸಂಸ್ಥೆಯ ಕಾರ್ಯದರ್ಶಿ ಮಂಜೇಗೌಡ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಸ್ಪರ್ಧೆ ಹೆಚ್ಚಾಗಿದ್ದು, ಓದಿದವರಿಗೆಲ್ಲಾ ಸರ್ಕಾರಿ ಹುದ್ದೆ ನಿರೀಕ್ಷಿಸುವುದು ಕಷ್ಟವಾಗಿರುವ ದಿನಗಳಲ್ಲಿ ಇದನ್ನು ಮನಗಂಡು ಮಕ್ಕಳಲ್ಲಿ ಚಿಕ್ಕಂದಿನಿಂದಲೇ ವ್ಯವಹಾರ ಜ್ಞಾನ ಹೆಚ್ಚಲಿ, ಆದಾಯ, ನಷ್ಟದ ಪರಿಚಯವನ್ನು ತಿಳಿಸುವ ಕೆಲಸ ಸಂಸ್ಥೆಯಿಂದಾಗುತ್ತಿದೆ. ಇದರಲ್ಲಿ ಎಲ್ಲ ಮಕ್ಕಳು ಅತ್ಯಂತ ಖುಷಿಯಿಂದ ಭಾಗವಹಿಸಿ ದೊಡ್ಡವರನ್ನು ನಾಚಿಸುವಂತೆ ವ್ಯಾಪಾರದಲ್ಲಿ ತೊಡಗಿದ್ದರು.

ಈ ವೇಳೆ ಸಿಂಹಾದ್ರಿ ಶಿಕ್ಷಣ ಸಂಸ್ಥೆಯ ಕಾಲೇಜು ಪ್ರಾಂಶುಪಾಲರಾದ ವೀಣಾ ಭರತ್‌ರಾಜ್, ಪ್ರೌಢ ಶಾಲೆಯ ಮುಖ್ಯೋಪಾಧ್ಯಯರಾದ ಧರಣಿ, ಸಂಯೋಜಕ ಅರುಣ್. ಎಂ.ಭರತ್‌ರಾಜ್ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಂಶುಪಾಲರಾದ ಶಶಿಧರ್ ಸೇರಿ ಶಿಕ್ಷಕರು ಹಾಜರಿದ್ದರು.

## ಶನಿವಾರದ ಕಾಫಿ ಧಾರಣೆ: 50 ಕೆ.ಜಿ.ಗೆ

| ಟ್ರೇಡರ್ಸ್ | ಎಪಿ | ಎಸಿ | ಆರ್‌ಪಿ | ಆರ್‌ಸಿ |
|---|---|---|---|---|
| ಹಾದಿ ಕಾಫಿ | 26,000 | 14,400 | 16,500 | 10,000 |
| ವೆಸ್ಟರ್ನ್ ಕಾಫಿ | 23,500 | 13,000 | 18,300 | 10,000 |
| ಗ್ರೈನ್‌ಕಾಫಿ ಸಕಲೇಶಪುರ | 22,900 | 12,000 | 18,300 | 9,500 |
| ಹಾನುಬಾಳು | 23,600 | 12,300 | 18,400 | 9,600 |
| ಬಾಳ್ಳುಪೇಟೆ | 22,800 | 11,000 | 18,300 | 9,000 |
| ಕೊಡ್ಲಿಪೇಟೆ | 22,800 | 11,800 | 17,800 | 8,800 |
| ಚಿಕ್ಕಮಗಳೂರು | 22,800 | 12,550 | 17,800 | 9,450 |
| ಸೋಮವಾರಪೇಟೆ | 22,800 | 12,600 | 00 | 00 |
| ಹಾಸನ | 22,900 | 00 | 00 | 00 |

ರೋಬಸ್ಟಾ ಚೆರಿ ಒಟಿ – 365 : ಅರೇಬಿಕ ಚೆರಿ ಒಟಿ– 465

## ಜಿಲ್ಲೆಯಲ್ಲಿ ಸಮಾಜ ವಿರೋಧಿ ಚಟುವಟಿಕೆ ಹೆಚ್ಚಳ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ನಡೆಯುತ್ತಿರುವ ಮಾದಕ ವ್ಯಸನಿಗಳ ಹುಚ್ಚಾಟ, ವ್ಹೀಲಿಂಗ್ ಹಾವಳಿ ಸೇರಿ ಸಮಾಜ ವಿರೋಧಿ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ರಾಷ್ಟ್ರ ರಕ್ಷಣಾ ಸೇನೆಯ ರಾಜ್ಯ ಸಂಚಾಲಕ ಸುರೇಶ್‌ಗೌಡ ಅವರು ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರ ಹಾಗು ಜಿಲ್ಲೆಯಲ್ಲಿ ಕೊಲೆ-ಸುಲಿಗೆ ಹೆಚ್ಚಾಗಿವೆ. 80 ಅಡಿ ರಸ್ತೆ ಸೇರಿ ಶಾಲಾ-ಕಾಲೇಜು ಬಳಿ ಗಾಂಜಾ ಸೇರಿ ಮಾದಕ ವಸ್ತುಗಳ ಹಾವಳಿ ಹೆಚ್ಚಾಗಿದೆ. ಇತ್ತೀಚೆಗೆ ಎಂಡಿಎನ್ ಮಾದಕವಸ್ತು ಕಳ್ಳ ಸಾಗಣೆ ಪ್ರಕರಣ ಹೆಚ್ಚಾಗು ತ್ತಿದೆ. ಕೆಲವರು ಸಾರ್ವಜನಿಕ ಸ್ಥಳಗಳಲ್ಲಿ ಅಸಭ್ಯ ವರ್ತನೆ ಹೆಚ್ಚಾಗಿವೆ. ಇದು ನಾಗರಿಕರ ಅಸಮಾಧಾನಕ್ಕೆ ಕಾರಣವಾಗಿದೆಂದರು.

ನಗರದ 80 ಅಡಿ ರಸ್ತೆಯಲ್ಲಿ ಪುಂಡರ ಬೈಕ್ ವ್ಹೀಲಿಂಗ್ ಹಾವಳಿ ಹೆಚ್ಚಾಗಿದೆ. ಅದರಿಂದ ಸಾರ್ವಜನಿಕರಿಗೆ ತೊಂದರೆ ಆಗಿದೆ. ಇಂಥಹವರ ಆಟಾಟೋಪಕ್ಕೆ ಪೊಲೀಸರು ಕೂಡಲೇ ಕಡಿವಾಣ ಹಾಕಬೇಕು. ಪೊಲೀಸರು ಕಾರ್ಯಾಚರಣೆಗೆ ಮುಂದಾದಾಗ, ರಾಜಕಾರಣಿಗಳು ಮಧ್ಯ ಪ್ರವೇಶ ಮಾಡಬಾರದು. ಪದೇ ಪದೇ ವ್ಹೀಲಿಂಗ್ ಹಾವಳಿ ನಡೆಯುತ್ತಿರುವುದು ನಾಗರಿಕ ಸಮಾಜಕ್ಕೆ ಮಾರಕವಾಗಿದೆ. ಇದರ ವಿರುದ್ಧ ನಾಗರಿಕ ಸಮಾಜ ರೊಚ್ಚಿಗೆದ್ದರೆ ಸಮಾಜದ ಸ್ವಸ್ಥ್ಯ ಹಾಳಾಗುತ್ತದೆ. ಅದಕ್ಕೆ ಪೊಲೀಸ್ ಇಲಾಖೆ ಅವಕಾಶ ನೀಡಬಾರದೆಂದು ಹೇಳಿದರು.

ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾಗುವ ಜಿಲ್ಲೆಯ ಸ್ವಾಸ್ಥ್ಯವನ್ನು ಹಾಳು ಮಾಡುವ ಕೆಲಸ ಆಗಬಾರದು. ಈ ಬಗ್ಗೆ ಇನ್ನಾದರೂ ಸಂಬಂಧಪಟ್ಟವರು ಎಚ್ಚೆತ್ತು ಕಾನೂನು ವಿರೋಧಿ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು. ಪುಂಡರ ಮೇಲೆ ಕಠಿಣ ಕ್ರಮ ಆಗಬೇಕು. ಇಲ್ಲದೇ ಇದ್ದರೆ ನಾವೇ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿ ನ್ಯಾಯ ಕೇಳ ಬೇಕಾಗುತ್ತದೆಂದು ಎಚ್ಚರಿಸಿ ದರು. ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ಧರ್ಮನಾಯಕ್ ಇದ್ದರು.

## ಕುತೂಹಲ ಕೆರಳಿಸಿದ ಸಿಎಂ ಆಪ್ತರ ದೆಹಲಿ ಯಾತ್ರೆ

» ಮೊದಲನೇ ಪುಟದಿಂದ

**ಫೆ.26ಕ್ಕೆ ಡಿ.ಕೆ.ಶಿ.ಗೆ ಬುಲಾವ್**

ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿ ಈಗಾಗಲೇ 2 ದಿನಾಂಕ ಕೊಟ್ಟಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಪ್ತ ಇಕ್ಬಾಲ್ ಹುಸೇನ್ ಈಗ ಮತ್ತೊಂದು ಮುಹೂರ್ತ ನಿಗದಿ ಪಡಿಸಿದ್ದಾರೆ. ಪಕ್ಷದ ಹೈಕಮಾಂಡ್ ಫೆ.26ರಂದು ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಬರುವಂತೆ ಸೂಚಿಸಿದೆ. ಅಂದು ನಮ್ಮ ನಾಯಕನಿಗೆ ಒಳ್ಳೆಯದಾಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಎರಡೂವರೆ ವರ್ಷ ಅಧಿಕಾರ ಪೂರ್ಣಗೊಳಿಸಿದ್ದಾರೆ. ಉಳಿದ ಎರಡೂವರೆ ವರ್ಷದ ಅವಧಿಗೆ ಶಿವಕುಮಾರ್ ಅವರಿಗೆ ಅವಕಾಶ ನೀಡಬೇಕೆಂಬುದು ಪಕ್ಷದ ಎಲ್ಲಾ ಸಚಿವರು ಹಾಗು ಶಾಸಕರ ಇಚ್ಛೆಯಾಗಿದೆ ಎಂದರು.

## ಪೊಲೀಸರಿಂದ ಮನೆ ಮನೆಗೆ ತೆರಳಿ ಜಾಗೃತಿ



• ಪ್ರಜೋದಯ ವರದಿ

**ಅರೇಹಳ್ಳಿ:** ಹೋಬಳಿ ವ್ಯಾಪ್ತಿಯಲ್ಲಿ ಕಳ್ಳತನ ಪ್ರಕರಣಗಳು ಕಂಡುಬಂದ ಹಿನ್ನಲೆ ಜನರಿಗೆ ಜಾಗೃತಿ ಮೂಡಿಸಲು ಅರೇಹಳ್ಳಿ ಠಾಣೆ ಪೊಲೀಸರು ಒಂಟಿ ಮನೆಗಳಿಗೆ ತೆರಳಿ ಜಾಗೃತಿ ಮೂಡಿಸುವ ಕೆಲಸಕ್ಕೆ ಮುಂದಾಗಿದ್ದಾರೆ.

ಸಬ್ ಇನ್ಸ್‌ಪೆಕ್ಟರ್ ಶೋಭ ಭರಮಣ್ಣವರ್ ತಮ್ಮ ಸಿಬ್ಬಂದಿಯೊಂದಿಗೆ ಪಟ್ಟಣದ ಕೆಲವು ಒಂಟಿ ಮನೆಗಳಿಗೆ ದಿಢೀರ್ ಭೇಟಿ ನೀಡಿದ ವೇಳೆ, ಮನೆಯ ಸದಸ್ಯರು ಹಾಗು ನೆರೆ ಹೊರೆಯವರು ಕೆಲಕಾಲ ಆತಂಕಕ್ಕೀಡಾದರು. ನಂತರ ಅವರ ಭೇಟಿಯ ಉದ್ದೇಶ ತಿಳಿದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಪರಾಧಗಳು ನಡೆದಾಗ ಘಟನಾ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ತನಿಖೆ ಸಂಬಂಧವಾಗಿ ತೆರಳುವುದು ಸಹಜ. ರಾತ್ರಿ ಇದ್ದಕ್ಕಿದ್ದಂತೆ ಇದೇ ಮೊದಲ ಬಾರಿಗೆ ಪೊಲೀಸ್ ಠಾಣಾಧಿಕಾರಿ ಸಿಬ್ಬಂದಿಯೊಂದಿಗೆ ಮನೆಗಳಿಗೆ ತೆರಳಿ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಪೊಲೀಸರ ನಡೆಗೆ ಸಾರ್ವಜನಿಕ ವಲಯದಲ್ಲಿ ಪ್ರಶಂಸೆ ವ್ಯಕ್ತವಾಗಿದೆ.

ಪಟ್ಟಣದಲ್ಲಿ ಕಳವು ಹಾಗು ಇನ್ನಿತರ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಇಂತಹ ಪೊಲೀಸರ ನಡೆ ಉತ್ತಮ ಹಾದಿಯಾಗಿದೆ. ಇತ್ತೀಚೆಗೆ ದಿನನಿತ್ಯ ಎಲ್ಲೆಡೆ ನಡೆಯುತ್ತಿರುವ ದರೋಡೆ ಪ್ರಕರಣಗಳನ್ನು ಗಮನಿಸಿದರೆ, ಸಾಮಾನ್ಯರು ಅಲ್ಪ ಪ್ರಮಾಣದ ಹಣವಾಗಲಿ ಅಥವಾ ಒಡವೆಯಾಗಲಿ ತೆಗೆದುಕೊಂಡು ಹೋಗುವುದೂ ಕಷ್ಟಕರವಾಗಿದೆ. ಪೊಲೀಸ್ ಇಲಾಖೆಯ ಇಂತಹ ಮುಂಜಾಗ್ರತಾ ಕ್ರಮಗಳು ಅಪರಾಧಗಳಿಗೆ ಕಡಿವಾಣ ಹಾಕುವ ಪ್ರಮುಖ ಹೆಜ್ಜೆಯಾಗಿವೆ. ಇದೇ ರೀತಿಯಲ್ಲಿ ಪೊಲೀಸ್ ಇಲಾಖೆ ಇನ್ನಷ್ಟು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡರೆ ಸಾರ್ವಜನಿಕರು ನಿಶ್ಚಿತೆಯಿಂದ ಬದುಕಲು ಸಾಧ್ಯವಾಗುತ್ತದೆ. ಅದರಿಂದ ಸಾರ್ವಜನಿಕರಲ್ಲಿ ಹೊಸ ಭರವಸೆ ಮೂಡಿದಂತಾಗಿದೆ ಎಂದು ಸ್ಥಳೀಯರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

## ಶ್ರೀ ವಿಜಯ್ ಶಾಂತಿ ಸೂರಿ ಮಂದಿರದ ಪ್ರತಿಷ್ಠಾಪನೆ


### ವಿವಿಧ ಕಲಾ ತಂಡಗಳಿಂದ ಮೆರವಣಿಗೆ

• ಪ್ರಜೋದಯ ವರದಿ

**ಅರಸೀಕೆರೆ:** ಜೈನ ಧರ್ಮದ ಪವಿತ್ರ ಧಾರ್ಮಿಕ ಯಾತ್ರಾಸ್ಥಳವಾಗಿ ರೂಪುಗೊಳ್ಳುತ್ತಿರುವ ನಗರದ ಹೊರವಲಯ ಜಾಜೂರು ಸಮೀಪ ಇರುವ ಭೈರವ ಧಾಮದಲ್ಲಿ ಹತ್ತಾರು ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ವಿಜಯ್ ಶಾಂತಿ ಸೂರಿ ಮಂದಿರದ ಪ್ರತಿಷ್ಠಾಪನ ಮಹೋತ್ಸವವು ಜೈನ ಪದ್ಧತಿಯಂತೆ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಲೋಕಾರ್ಪಣೆಯಾಗುತ್ತಿದೆ.

ನೂತನ ದೇವಾಲಯದ ಲೋಕಾರ್ಪಣೆ ಅಂಗವಾಗಿ ಕಳೆದ ಮೂರು ದಿನಗಳಿಂದ ಭೈರವ ಧಾಮದಲ್ಲಿ ಜೈನ ಆಚಾರ್ಯ ಶ್ರೀ ದೇವೇಂದ್ರ ಮಹಾರಾಜ್ ಮತ್ತು ಅವರ ತಂಡದವರಿಂದ ವಿಶೇಷ ಪೂಜೆ ಜಪತಪಗಳು ಜೈನ ಮಂದಿರದ ಪದ್ಧತಿಯಂತೆ ನಡೆಯುತ್ತಿವೆ.

ಶನಿವಾರ ಬೆಳಿಗ್ಗೆ ನಗರದ ರಂಗೇಗೌಡರ ಬೀದಿಯಲ್ಲಿರುವ ಜೈನ ಮಂದಿರದ ಆವರಣದಲ್ಲಿ ಸೇರಿದ ಸಹಸ್ರಾರು ಜೈನ ಬಂಧುಗಳು ಜೈನರ ಕಲಾ ಸಂಸ್ಕೃತಿಯನ್ನು ಸಾರುವ ವೇಷ ಭೂಷಣಗಳೊಂದಿಗೆ ರಾಷ್ಟ್ರ ಧ್ವಜ ಹಾಗೂ ನಾಡಧ್ವಜ ಸಮೇತ ತಮ್ಮ ಧರ್ಮದ ಧ್ವಜಗಳ ಹಿಡಿದು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸುವ ಮೂಲಕ ಗಮನ ಸೆಳೆದರೆ ಸ್ಥಳೀಯ ಜಾನಪದ ಕಲಾ ತಂಡಗಳಾದ ವೀರಗಾಸೆ ಗೊಂಬೆಗಾರುಡಿ ಡೊಳ್ಳು ಕುಣಿತ ತಮಟೆ ವಾದ್ಯ, ಚಂಡೇವಾದ್ಯ ಹೀಗೆ ಜಾನಪದ ಕಲಾವಿದರ ಕಲಾ ಪ್ರದರ್ಶನ ಉತ್ಸವದ ಮೆರುಗನ್ನು ಮತ್ತಷ್ಟು ಹೆಚ್ಚುವಂತೆ ಮಾಡಿತ್ತು.



ಜೈನ ಸಮಾಜದ ಯುವಕ ಮತ್ತು ಯುವತಿಯರು ಟಾಂಗಾ ಸವಾರಿ ಮಾಡುತ ಉತ್ಸವದಲ್ಲಿ ಪಾಲ್ಗೊಂಡರೆ ಇನ್ನು ಕುದುರೆ ಸಾರೋಟಿನಲ್ಲಿ ಕೂರಿಸಿ ದಾನಿಗಳನ್ನು ಮೆರವಣಿಗೆ ಮೂಲಕ ಭೈರವಧಾಮಕೆ ಕರೆತರಲಾಯಿತು.

ಮೆರವಣಿಗೆಯಲ್ಲಿ ಯೋಗಿರಾಜ್ ಶ್ರೀ ವಿಜಯ್ ಶಾಂತಿ ಗುರು ಟ್ರಸ್ಟ್ ಅಧ್ಯಕ್ಷರಾದ ಸುರೇಶ್ ಮೆಹ್ತಾ, ವಿಜಯ್ ಸುರನ, ಮಂಗಿಲಾಲ್ ಮೆಹ್ತಾ, ರಮೇಶ್ ಪರಮಾರ್, ಧೀರಜ್ ಜೈನ್ ದುಬೈ, ವಿನೋದ್ ಮುನೋತ್, ನಕೂಡ ಭೈರವ ಟ್ರಸ್ಟ್ ಸದಸ್ಯರಾದ ಪರಾಸ್ ಮಾಲ್ ಮೆಹ್ತಾ, ಮನೋಹರ್ ಸುರನ, ಗ್ಯಾನೆಶ್ ಮೆಹತ, ಕಮಲೇಶ್ ಸುರಾಣ,

ಅರಸೀಕೆರೆ ಜೈನ ಸಮಾಜದ ಅಧ್ಯಕ್ಷರಾದ ಮಹಾವೀರ ಬೋಹರ, ಶಾಂತರಾಜು ಜೈನ್, ಭೈರವ ಧಮದ ಸಂಸ್ಥಾಪನ ಅಧ್ಯಕ್ಷರಾದ ಅಶೋಕ್ ಸೂರನ ಹಾಗೂ ಅರಸೀಕೆರೆ ಜೈನ ಸಂಘಟನೆಯ ಅಧ್ಯಕ್ಷ ಚೇತನ್ ಜೈನ್ ಸೇರಿದಂತೆ ಮತ್ತು ಇತರರು ಪಾಲ್ಗೊಂಡಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019